ಕಣವಿ
ಕಾವ್ಯ
ಸಂಪುಟ
೨

ಆಕಾಶಬುಟ್ಟಿ

ಚೆನ್ನವೀರ ಕಣವಿ



ಆಕಾಶ ಬುಟ್ಟಿ

ಚೆನ್ನವೀರ ಕಣವಿ

ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ
ಗೋಕುಲಂ ಮೂರನೆಯ ಹಂತ, ಮೈಸೂರು - ೨

AKAASHA BUTTI
A Collection of poems

Written by
Chennaveera Kanavi

Published by
Talukina Venkaniah Smaraka Granthamale
9, Ramya, Gokulam 3rd stage
Mysore - 570 002

Pages : 109   *Price : Rs. 45/-*

First Impression : 1953

ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆಯಿಂದ ಮೊದಲನೇ ಮುದ್ರಣ : 2009

Cover Page : Sudakar Darbe

D.T.P. : **LEKHA GRAPHICS**
Mysore -8 Ph: 2482854

Printing : Good Touch Printers, Mysore

ನಮಸ್ಕಾರ

ಗೆಳೆತನವನ್ನೇ ಇಹಲೋಕದ ಅಮೃತವೆಂದು ತಿಳಿದು, ತನ್ನ ಪಾಲಿನ ಭಾಗ್ಯವನ್ನು ಹಲವರಿಗೆ ಹಂಚಿ, ಪರಹಿತದಲ್ಲಿ ತನ್ನನ್ನೇ ಮರೆತುಬಿಡುವ ಸಾತ್ವಿಕ ಜೀವವೊಂದು ನನ್ನ ಬಾಳಿನಲ್ಲಿ, ದೊಡ್ಡ ಮನಸ್ಸಿನ ಮಹಾದೇವನಂತೆ ಸುಳಿದು ಇದ್ದಕಿದ್ದೊಲೆ ಕಣ್ಮರೆಯಾಯಿತು. ಏನು ಕೊಟ್ಟರೆ ತಾನೆ ಆ ಜೀವ ಇನ್ನು ಮರಳಿ ಬಂದೀತು...! ಜಾನಪದ ಜೀವನವನ್ನು ಅರಗಿಸಿಕೊಂಡು ಕೊನೆದಾಡಿ ಲೋಕಗೀತಕ್ಕೆ ಮಾರುವೋದ ಶಿವೇಶ್ವರನ ಕವಿತಾ ಶಕ್ತಿಯಿಂದ ಕನ್ನಡ ನವ್ಯಕಾವ್ಯಕ್ಕೆ ಚೈತನ್ಯವೊದಗುತ್ತಿದ್ದ ಸಮಯದಲ್ಲೇ ನಮ್ಮನ್ನಗಲಿ ದುದು ಮರೆಯಲಾರದ ಕೊರಗನ್ನುಂಟು ಮಾಡಿದೆ.

ಯಾರ ಅನುಭೂತಿಯಲ್ಲಿ ಮೊಟ್ಟ ಮೊದಲು ನನ್ನ ಕಲ್ಪನೆ ಆಡಿ ಕವಿತೆ ಯಾಗಿ ಮಾಡಿತೋ, ಆ ಸ್ನೇಹಜೀವಿ ಶಿವೇಶ್ವರನ ಚಿರಂತನ ಸ್ಮರಣೆಗೆಂದು ಈ 'ಆಕಾಶ ಬುಟ್ಟಿ'ಯನ್ನು ಅರ್ಪಿಸುತ್ತಿದ್ದೇನೆ. ಇಲ್ಲಿ ಸಲ್ಲಿಸಿದುದು ಅಲ್ಲಿಯೂ ಸ್ವೀಕೃತವಾದೀತೆಂದು ನಂಬಿ ನಮಸ್ಕರಿಸುತ್ತೇನೆ.

ಈ ಸಂಕಲನವು ಬೆಳಕಿಗೆ ಬರುವುದಕ್ಕೆ ಗೆ. ಶ್ರೀ ಬಸವರಾಜ ಕಟ್ಟೀಮನಿ ಯವರ ಕಾವ್ಯಾನುರಾಗವೇ ಕಾರಣ. ಇಲ್ಲಿಯ ಕವಿತೆಗಳಲ್ಲಿ ಬಹುಪಾಲು ಅವರ ಪ್ರೋತ್ಸಾಹನೆಯ ಫಲವೆಂದರೂ ಒಪ್ಪುತ್ತದೆ. ಅವರ ಕಾವ್ಯ ರಸಜ್ಞತೆಗೆ ಅತ್ಯಂತ ಕೃತಜ್ಞನಾಗಿದ್ದೇನೆ. ಹಾಗೆಯೇ ಕವಿಮಿತ್ರ ಶ್ರೀ ಜಿ.ಆರ್. ಪಾಂಡೇಶ್ವರ ಅವರು ನನ್ನಲ್ಲಿ ತೋರಿಸುತ್ತ ಬಂದಿರುವ ವಾತ್ಸಲ್ಯ ಪೂರಿತವಾದ ಸೌಜನ್ಯದ ಕೃಪೆಗಾಗಿ ಬಹಳ ಋಣಿಯಾಗಿದ್ದೇನೆ.

ಹಸ್ತಪ್ರತಿಯನ್ನು ತಯಾರಿಸಿ ಕೊಟ್ಟು, ಸಹಕರಿಸಿದ ನನ್ನ ಚಿ||ಸೌ|| ಶಾಂತಾದೇವಿಯ ಉಪಕೃತಿಯನ್ನೂ ಇಲ್ಲಿ ನೆನೆಯದಿರಲಾರೆ.

ಪ್ರಕೃತ ಸಂಕಲನವನ್ನು ಅಂದವಾಗಿ ಮುದ್ರಿಸಿ, ಪ್ರಕಟಗೊಳಿಸಿ ತಮ್ಮ ಕಾವ್ಯಪ್ರೇಮವನ್ನು ವ್ಯಕ್ತಪಡಿಸಿದ ಪ್ರತಿಭಾ ಗ್ರಂಥಮಾಲೆಯ ಸಂಪಾದಕರಾದ ಶ್ರೀ ಬಾಲಚಂದ್ರ ಘಾಣೇಕರ ಅವರಿಗೆ ನನ್ನ ಧನ್ಯವಾದಗಳು.

'ಚೆಂಬೆಳಕು'

ಧಾರವಾಡ, ೭-೫-೧೯೫೩ ಚೆನ್ನವೀರ ಕಣವಿ

ಕೃತಜ್ಞತೆಯ ನುಡಿ


ಹಿರಿಯರಾದ ಶ್ರೀ ತ.ಸು. ಶಾಮರಾಯರು ಪ್ರಾರಂಭಿಸಿದ ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆಯನ್ನು ಅವರ ಪುತ್ರ ಶ್ರೀ ಟಿ.ಎಸ್. ಛಾಯಾಪತಿಯವರು ಕಳೆದ ನಾಲ್ಕು ದಶಕಗಳಿಂದ ಯಶಸ್ವಿಯಾಗಿ ಮುಂದುವರಿಸಿಕೊಂಡು ಬಂದು ಅನೇಕ ಮೌಲಿಕ ಕೃತಿಗಳನ್ನು ಪ್ರಕಟಿಸುವುದಲ್ಲದೆ 'ಅತ್ಯುತ್ತಮ ಪ್ರಕಾಶನ ಪ್ರಶಸ್ತಿ' (೧೯೯೯) ಯನ್ನು ಪಡೆದ ಶ್ರೇಯಸ್ಸಿಗೂ ಪಾತ್ರರಾಗಿದ್ದಾರೆ. ಈ ಗ್ರಂಥ ಮಾಲೆಯಲ್ಲಿ ನನ್ನ ನಾಲ್ಕು ಪುಸ್ತಕಗಳು ಅಚ್ಚುಕಟ್ಟಾಗಿ ಪ್ರಕಟಗೊಂಡಿರುವುದನ್ನು ಇಲ್ಲಿ ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತೇನೆ.

ನನ್ನ 'ಸಮಗ್ರ ಕಾವ್ಯದ' ಮೂರು ಆವೃತ್ತಿಗಳು ಪ್ರಕಟಗೊಂಡಿದ್ದರೂ ವಿದ್ಯಾರ್ಥಿಗಳ ಹಾಗೂ ಸಾಮಾನ್ಯ ಓದುಗರ ದೃಷ್ಟಿಯಿಂದ ಬಿಡಿಕವನ ಸಂಗ್ರಹಗಳ ಪ್ರತಿಗಳೂ ಅವರಿಗೆ ಲಭ್ಯ ವಾಗುವದು ಪ್ರಯೋಜನಕರವೆಂದು ಭಾವಿಸಿ, ಸ್ವತಃ ಲೇಖಕರೂ ಆಗಿರುವ ಪ್ರಕಾಶಕ ಛಾಯಾಪತಿಯವರು ಪ್ರಸ್ತುತ ಮಾಲೆಯನ್ನು ಪ್ರಾರಂಭಿಸಿದ್ದಾರೆ. ಅದಕ್ಕೆ ತಕ್ಕ ರಕ್ಷಾಪುಟದ ವಿನ್ಯಾಸವನ್ನು ಸುಂದರವಾಗಿ ರಚಿಸಿಕೊಟ್ಟ ಖ್ಯಾತ ಕಲಾವಿದ ಶ್ರೀ ಸುಧಾಕರ ದರ್ಭೆಯವರಿಗೂ ಈ ಯೋಜನೆಯ ಮುಖ್ಯ ಪ್ರೇರಕರಾದ ಶ್ರೀಛಾಯಾಪತಿಯವರಿಗೂ ನನ್ನ ವಂದನೆಗಳು.

ಧಾರವಾಡ — ಚೆನ್ನವೀರ ಕಣವಿ

೨೦ - ೭ - ೨೦೦೯

ಪರಿವಿಡಿ



೧೯೫೩ರಲ್ಲಿ ಕವಿ ಕಣವಿಯವರು

(ಭಾವಚಿತ್ರ : ನಾರಾಯಣರಾವ್ ಕುಲಕರ್ಣಿ, ವಿಜಾಪುರ)

ಆಕಾಶ ಬುಟ್ಟಿ

ಆಕಾಶ ಬುಟ್ಟಿ

೧

ಹೊಗೆ ತುಂಬಿ
ನಗೆ ತುಂಬಿ
ಬಣ್ಣಬಣ್ಣದ ನವಿರು ಕಾಗದದ ಬುಟ್ಟಿಯಲಿ
ಜೀವತುಂಬಿ,
ದೂರ ಹಾರುವದೆಂಬ ಭರವಸೆಯ ನಂಬಿ,
ನಮ್ಮ ಹಿರಿಯಾಸೆಗಳ ಉರಿವ ಕಕ್ಕಡವಿಟ್ಟು,
ಉತ್ಸಾಹ ಸಾಹಸಕೆ ರೂಪುಗೊಟ್ಟು,
ಮೇಲುನಾಡಿಗೆ ತೇಲಬಿಟ್ಟೆವಿದೊ ಚೈತನ್ಯದಾಕಾಶಬುಟ್ಟಿ !
ಏರುವದೊ
ಇಳಿಯುವುದೊ
ಗಾಳಿಯಘಾತದಲಿ ಜೋಲಿ ಹೊಡೆದುರುಳುವದೊ ?
ಮೈ ಸುಟ್ಟುಕೊಳ್ಳುವದೊ,
ಕಾಣಲಾರದ ಕೊಳ್ಳದಾಳದಲಿ ಬೀಳುವದೊ
ಆರು ಕಂಡಿಹರಿದನು ?
ತಿಳಿಯಲಾರದ ಹದನು !
ಆದರೂ ಆದರೂ ಹಾರಿಸಿದೆವಿದನು !
ಹುಡುಗತನದುತ್ಸಾಹ ಕೊನೆಬಲ್ಲುದೇನು?

೨

ಆಕಾಶದ ಪ್ರಕಾಶದಲಿ ಎದೆಯ ತೆರೆದು
ಇಳೆಯ ಬಾಳಿನ ಹಂಗು ನೂಲು ಹರಿದು
ಮೇಲೆ ತೇಲಾಡುವುದರ ಕಣ್ಣಾರೆ ಕಂಡು

ನನ್ನ ಬಗೆಯಾಶೆಗಳು ರೆಕ್ಕೆಗೊಂಡು
ಅಂಧಂ ತಮಸ್ಸಿನಲು ಬೆಳಕನುಂಡು
ಮುಗಿಲಲ್ಲಿ ಬಿತ್ತಿರುವ ಮುತ್ತುಗಳ ಬೆಳೆಯ
ಹಾಲುಗಾಳನು ಬಯಸಿ ಹಾರುತಿವೆ ಗೆಳೆಯ!
ಅದೊ! ನೋಡು ನೋಡು
ಚಿಕ್ಕೆಗುರಿ ಬೆಂಬತ್ತಿ ಸಾಗಿರುವ ಕಿರುದೀಪಕಾವ ಕೇಡು ?
ಇಳೆಯ ಬಾಳರಳಿ ಬಂಗಾರ ಬರಣಿಯು ತೇಲಿ
ಬೆಳ್ಳಿ ಚಿಕ್ಕೆಗೆ ತೆಕ್ಕೆ ಹಾಕಿಹುದು ನೋಡು!
ಬೆಳಕು ಬೆಳಕಿಗೆ ಮುತ್ತು ಕೊಟ್ಟಿಹುದು
ಆ ಪ್ರೀತಿ ಸೌರಭವೆ ತೋಳಬಂದಿ!
ಸೌಂದರ್ಯದಾನಂದವಿಲ್ಲಿ ಬಂದಿ.

೩

ದೀನ ಮಾನವ ರಚಿತ ಆಕಾಶ ಬುಟ್ಟಿ
ದಾನವರ ಬಿರುಗಾಳಿ ದಾಳಿಯನು ಮೆಟ್ಟಿ
ಬಾನವರನಪ್ಪಿ ಒಂದಾಗಿಹುದು ನೋಡು!
ನೋಡಿದೆಯ ಕವಿಯೆ?
ಊರ್ಧ್ವಮುಖಿಗಲ್ಲದಿದು ಉಳಿದವರಿಗಳವೆ?
ಆತ್ಮಬಲದೆದುರು ಮೇಣುಳಿದ ಬಲವೆ?
ಆಕಾಶಬುಟ್ಟಿಯೊಲು ಏಕಾಕಿಯಾದರೂ
ಎದೆಗೆದೆಯ ಹೊಂದೀಪ ಉದ್ದೀಪನಂಗೊಂಡು
ಬಾಳದ್ವೀಪವ ಬೆಳಗುವಂತೆ ಹಾಡು
ಎಂದೆಂದು ನೀನಿಂಥ ಹಾಡ ಹಾಡು!

ಹೊಸ ಬಾಳು ನಮ್ಮದಿದೆ

ಹೊಸ ಜಗವು ರೂಪುಗೊಂಡಿಹುದೀಗ ; ಹೊಸ ಬಾಳು
ನಮ್ಮದಿದೆ, ಹೊಸತೆಲ್ಲ ನಮ್ಮದಿನ್ನು!
ಹಳೆಯ ಕಾಲದ ರೂಢಿ - ಜಡಮತೀಯರನೆಲ್ಲ
ಬಿಟ್ಟು ಬಿಡಿ ಅವರವರ ಪಾಡಿಗಿನ್ನು -

ಯುವ ಜನಾಂಗವೆ ಬನ್ನಿ ನವರಂಗಕೆ
ಹೊಸ ಪಾತ್ರಧಾರಿಗಳ ಹೊಸ ಕುಣಿತಕೆ ;
ಮೂಲೆಯಲ್ಲವಿತವಗೆ ಬರಿ ಕತ್ತಲು
ಸತ್ವತಮ ಸಾಹಸಕೆ ಯಶವೆತ್ತಲು !

ಹೊಸ ಮಳೆಯ ಧಾರೆಯಲಿ ಇಂದಿನೀ ಜೀವನಕೆ
ಬಂದಿದೆ ಮಹಾಪೂರ, ಬತ್ತದಿನ್ನು!
ಹಳೆಕೊಳೆಯ ತತ್ತ್ವಗಳು ಸಂಕುಚಿತ ಭಾವಗಳು
ಕೊಚ್ಚಿ ಹೋಗಿವೆ, ತಿರುಗಿ ಬಾರವಿನ್ನು -
ಮುಂಬಾಳ ಮುಂಜಾವು ನಗೆಯ ಬೀರಿ
ಕೊರಳೆತ್ತಿ ಹಾಡುತಿದೆ ಜಯವ ಕೋರಿ ;
ಮರೆತು ಬಿಡಿ ಹಿಂಗತೆಯ ಹೀನತೆಯನು
ಕೊಟ್ಟು ಬಿಡಿ ಆ ವ್ಯಥೆಗೆ ತರ್ಪಣವನು!

ಎಂದಿನಿಂದಲೊ ನಿಮ್ಮ ಎದೆಗಳಲಿ ಹುದುಗಿಹುದು
ಹೊಸ ಸಮಾಜದ ರೂಪ-ರೇಷ್ಮೆ ಬಯಕೆ;
ನಿಮ್ಮ ಹೊಂಗನಸುಗಳ ಕಂಡರಿಸಲೆಂದೀಗ
ಹದಗಾಲ ಬಂದಿರಲು ಮುದುರಲೇಕೆ?

ಬಾಳವೃಕ್ಷದ ಜೀರ್ಣ ಪರ್ಣಂಗಳುದುರಿ
ಹೋಗುತಿವೆ ಚಿಗುರೆಲೆಗೆ ಹೊಗರು ಬೀರಿ,
ಜೋಲು ಮೊಗ ಯುವಕರಿಗೆ ಸಲ್ಲ ಹೊಲ್ಲ;
ನಗುತ ಮುಂಬರಿಯುತಿರೆ ಬಹುದು ಗೆಲ್ಲ!

ಬಡವ ಬಲ್ಲಿದರೆಂಬ ಜಾತಿಗೀತಿಗಳೆಂಬ
ವಿಷಮತೆಯ ನಂಟೇಕೆ ಹೊಸ ಬಾಳಿಗೆ ?
ಹೆಣ್ಣೆಂದು ಹೀಗಳೆವ ಕುನ್ನಿತನವಿನ್ನೇಕೆ?
ಕಸವೇಕೆ ನಳನಳಿಪ ಹುಲುಸು ಬೆಳೆಗೆ ?

ಒಡಕು ಬಾಳಿನಲಿಲ್ಲ ಚೆಲುವು ಮೋದ
ಒಡಕು ತಂಬೂರಿಯಲಿ ಒಡಕು ನಾದ;
ಮಣ್ಣು ಮಣ್ಣೇ ಹೊನ್ನ ಬೆಳೆಯಬಹುದು
ನಮ್ಮ ದೃಢ ಮುಷ್ಟಿಯಲಿ ಸಗ್ಗವಿಹುದು.

ಮುಗಿದು ಹೋಯಿತು ಬಾಲ್ಯ, ಮುಂದೆ ಬಾರದು ಹರೆಯ
ಚಣಚಣಕು ಆಯುಷ್ಯ ಸವೆಯುತಿಹುದು ;
ಕಾಲಗತಿಯೊಡನೆ ಸಮರಸವಾಗಿ ಸಾಗುವದೆ
ಜೀವನ ಪ್ರವಾಹಕ್ಕೆ ದೊರೆತ ಗುರಿಯು.

ನಮ್ಮ ಅನುಭವಗಳೇ ನಮ್ಮ ಗಳಿಕೆ,
ಕಾಲದೊರೆಗಲ್ಲಿನಲಿ ನಿಂತ ಬಾಳ್ಕೆ ;
ನೊರೆಗೆ ಮರುಳಾಗುವದೆ ಹೇಡಿ ಬದುಕು
ಮುತ್ತು ಪಡೆವರೆ ಆಳ ಮುಳುಗಬೇಕು.

ನಿಮ್ಮೆದೆಯೊಳಿದೆ ಛಲವು ನಿಮ್ಮ ಕೈಗಿದೆ ಬಲವು
ಆದರೇತಕೊ ಹಿಂದೆ ಸರಿಯುತಿಹಿರಿ -
ಅವ್ಯಕ್ತ ತೇಜಗಳೆ ಅಮೃತಪುತ್ರರು ನೀವು
ಪ್ರತಿಗಾಮಿ ಶಕ್ತಿಗಳ ಸದೆಬಡಿಯಿರಿ.

ಜ್ಞಾನವೃದ್ಧರು ತಿಳಿವನೆರೆಯುತಿರಲಿ
ಬೇಡವೆಂದವರಾರು - ಅವರು ಬರಲಿ;
ಹುಮ್ಮಸಕೆ ತಣ್ಣೀರನೆರಚದಿರಲಿ
ಹೊಸ ಸಮಾಜದ ಗುರಿಯು ನೇರವಿರಲಿ.

ಹೊಸ ಜಗವು ರೂಪುಗೊಂಡಿಹುದೀಗ ; ಹೊಸ ಬಾಳು
ನಮ್ಮದಿದೆ, ಹೊಸತೆಲ್ಲ ನಮ್ಮದಿನ್ನು!
ಹಳೆಯ ಕಾಲದ ರೂಢಿ ಜಡಮತೀಯರನೆಲ್ಲ
ಬಿಟ್ಟುಬಿಡಿ ಅವರವರ ಪಾಡಿಗಿನ್ನು!

ಹೊಸಬಾಳು ರಸಬಾಳನಪ್ಪುತಿಹುದು
ಸಮತೆ - ಸಾಮನ್ಯತೆಗೆ ಒಪ್ಪುತಿಹುದು ;
ಹೊಸ ಗಂಧ ತಂದಿಹನು ಮಂದಾನಿಲಂ
ಹೊಸಕಾಲದುದಯ ರವಿ - ಸುಸ್ವಾಗತಂ.

ಸಾವುದೆಲ್ಲಾ ಸತ್ತು.......!

೧

"ಸಾವುದೆಲ್ಲಾ ಸತ್ತು ಬಾನಾಳ್ಕೆ ಪೂಣ್ಗೆ!"
ಭೂಭಾರಮಾದ ಕೊಳೆಬೆಳೆಯೆಲ್ಲ ಮಾಣ್ಗೆ!

ಒಳಿತಿದನು ಅರಿತು ಆಚರಿಪಂಗೆ
ದಿಟವೆಂದು ನಂಬುವಗೆ,
ಹಂಬಲಿಸಿ ಹರಿದೋಡುವಂಗೆ.

ಶೋಕಕೆದೆಗೊಟ್ಟವಗೆ,
ಲೋಕಹಿತಗೈವಂಗೆ

ಜಗಕೆ ಹೊಸ ಬಗೆಯ ನಲ್ ಕಾಣಿಕೆಯನೀವಂಗೆ!
ಹಿರಿಯಾಸೆ ಹೊದ್ದವಗೆ
ಬಿದ್ದು ಎದ್ದವಗೆ, -
ಮುಂದೋಡಿ ಹಿಂದೆ ನೋಡಿ, ಕೈ ಬೀಸಿ ಕರೆದು ಬೇಡಿ
ಕತ್ತೆತ್ತಿ ಮುನ್ನಡೆದ ಧೀರನೆ ಧುರೀಣ!
ಸಣ್ಣತನ ಸ್ವಾರ್ಥ ದಿಗ್ಬಂಧನವನುಚ್ಚಳಿಸಿ

ಎಸೆಯೊ ಪೊಸಮಸೆಯ ಬಾಣ
ಅದರಾಚೆ ನಮ್ಮ ತಾಣ,
ಸುವಿಶಾಲ ಪರಿಧಿ ಕಾಣ!

ದೇಶದಿಗ್ದೇಶಗಳ ಹೊಸ ಗಾಳಿ ಬೆಳಕು
ತನುಮನವನೆಚ್ಚರಿಸಿ ಬಾಳ ತೊಳೆಯುವ ಸೆಳಕು
ಇಂದಿಂದೆ ಬೇಕು
ಬಲಗೊಳಲಿ ಬದುಕು,
ಈಸು ದಿನ ಬೆದರಿ ಬೆದರಿ, ತನ್ನಲ್ಲೆ ಮುದುರಿ ಮುದುರಿ
ಬೂದಿಯಲಿ ಉರುಳಿ ಹೊರಳಿ
ತನಿಗೆಂಡದಂತೆ ನರಳಿ
ಮಲಗಿರುವ ಹೆಬ್ಬಯಕೆ ಮೈಕೊಡವಿ ಮೇಲೆದ್ದು ಮೇರುಗಿರಿ ಗೆಲ್ಗೆ!
"ಸಾವುದೆಲ್ಲಾ ಸತ್ತು ಬಾನಾಳ್ಕೆ ಪೂಣ್ಗೆ!"

ಕೊನೆಯ ಎಚ್ಚರಿಕೆ!

೧

ಏಸುಕ್ರಿಸ್ತ ಏಸು ಬುದ್ಧ
ಏಸು ಬಸವ ಬಂದರೂ,
ತಮ್ಮ ಅಂತರಂಗವನ್ನೆ
ಲೋಕದೆದುರು ತೆರೆದರೂ,
ನಶ್ವರದಲಿ ಈಶ್ವರನನು
ಕಂಡು ಜಗದ ಕಲ್ಯಾಣಕೆ
ಎದೆಯ ಪ್ರಣತಿ ಜ್ಯೋತಿಯಲ್ಲಿ
ದಯೆಯ ತೈಲವೆರೆದರೂ,
ಪುಣ್ಯ ಪುರುಷ ಗಾಂಧಿ ತಂದೆ
ನೆತ್ತರಲ್ಲಿ ನಾಂದರೂ

ನೀನು ಮಾತ್ರ ಬೋರ್ಕಲ್ಲೆಲೆ ಪೆಡಂಭೂತನಂತಿಹೆ!
ಮತ್ತೆ ಹೊಲಸು ಕೆಸರಿನಲ್ಲೆ ಮತ್ತನಂತೆ ಬಿದ್ದಿಹೆ;
ತೊಳೆದು ಹೋಗಲಿಲ್ಲವಿನ್ನು ನಿನ್ನ ಮನದ ಮೈಲಿಗೆ
ಬರುವದಿಲ್ಲೆ ನಾಚಿಗೆ ?

ಮೇಲೆ ಆಹಾ! ಥಳಕು ಬೆಳಕು
ಒಳಗಸಹ್ಯ ಕೊಳಚೆ ಕೊಳಕು
ದುರಾಚಾರ ದುರುದ್ದೇಶ
ದುರ್ನೀತಿಯ ಹೊಲೆಯಿದೆ;
ಡಾಂಭಿಕತೆಯ ಮುಸುಗಿನಲ್ಲಿ
ಬೂಟಾಟಿಕೆಯಾಟವಲ್ಲಿ;

ನೀತಿಯೆಂಬ ಹೆಸರಿನಲ್ಲಿ
ಹುಚ್ಚು ಹೊಳೆಯ ಹಸುರಿನಲ್ಲಿ
ಅಹಂಕಾರ ಹೂಂಕಾರವ -
ಗೈವ ದುರುಳ ಕರುಳಿನಲ್ಲಿ
ಮೋಸವಲ್ಲಿ ನೆಲಸಿದೆ !
ಬಲ್ಮೆ ಸುಲಿಗೆ ನಡೆಸಿದೆ !
ಗುಣವಿಹೀನ ನಿನ್ನ ರೂಪ
ಬಿಸಿಲ ತಾಪ ವಿಷದ ಕೂಪ
ರೊಚ್ಚಿಗೆದ್ದು ಕೊಡಲು ಶಾಪ
ಅಯ್ಯೊ ಪಾಪ ಎನಿಸಿದೆ.

ನಗುವ ಹೂವ ಹೊದರಿನಲ್ಲಿ ಹಾವು ಹುತ್ತ ಕಟ್ಟಿದೆ
ವಿಷದ ಹೊಗೆಗೆ ದೀನ ಜನರ ಉಸಿರು ಕಟ್ಟಿ ಬಿಟ್ಟಿದೆ.
ಎತ್ತ ನೋಡಿದತ್ತ ಕುತ್ತು ಕಾಲು ಕೆದರಿ ನಿಂತಿದೆ
ಕರುಣೆಯೊಡಲು ಕುಸಿದು ಬಿದ್ದ ಜ್ವಾಲಾಮುಖಿಯಂತಿದೆ!

೨

ದೊಡ್ಡ ಜನರ ದೊಡ್ಡಸ್ತಿಕೆ
ಹೊಗಳು ಭಟರ ಡಬಡ್ಡಳಿಕೆ
ಅನ್ಯಾಯದ ದಬ್ಬಾಳಿಕೆ
ಹೇಳು ಕ್ರೂರಿ ಏತಕೆ?
(ಸ್ವಲ್ಪ ಜನರ ಸಂತೋಷಕೆ!)
ನರಗೆ ನರನ ರಕ್ತ ರುಚಿಯೆ?
ಶೋಷಣೆಯಿದು ನಿನಗೆ ಶುಚಿಯೆ?
ಹೇ! ಸಮಾಜಪಾತಕಿ
ಕಪಟ ವೇಷ ನರ್ತಕಿ!

ನಿನ್ನ ಲಾಸ್ಯ ಹಾಸ್ಯದಲ್ಲಿ
ಕುಡಿತ ಮೆರೆತ ಕೇಕೆಯಲ್ಲಿ
ಉದರಭರಣಕಾಗಿ ಹರಣ
ಕೊಡುವ ಈ ದುರಂತ ಮರಣ
ಚರಮ ಗೀತ ಕೇಳದೆ?

ಅಂಜುಬುರುಕರೆಂದು ಕಪ್ಪೆ ಚೆಲ್ಲಿ ಮೋಜು ನೋಡುವೆ
ಮುಗ್ಧ ಕುಸುಮಕೋಮಲೆಯರ ರುಂಡಮಾಲೆ ಸೂಡುವೆ!
ನಿಷ್ಕಲ್ಮಷ ಎದೆಗಳನ್ನೆ ಹತ್ತಿ ತುಳಿದು ಹಿಂಡುವೆ
ಧೀರರೆಂದು ಕಂಡು ಬರುವ ಮೊದಲೆ ಜೀವ ಹೀರುವೆ!

ಕೈಯ ತುತ್ತು ಕಸಿಯುವೆ
ಮತ್ತೆ ಹಲ್ಲು ಮಸೆಯುವೆ
ಪದೇ ಪದೇ ಅದೇ ರೀತಿ
ಅದೇ ನೀತಿ ಎನ್ನುವೆ,
ಹಳಸಿ ಹೋದ ತತ್ತ್ವಗಳನೆ
ಮೆದುಳಿನಲ್ಲಿ ತುರುಕುವೆ,
ಎಂದಿನಂತೆ ನಿನ್ನ ಭೂಮ
ಹೊಟ್ಟೆ ಹೊರೆದುಕೊಳ್ಳುವೆ!

೩

ಹಗಲು ಇರುಳು ಅರಳು - ಮರಳು
ಇದ್ದು ಬಿದ್ದ ಜೀವಕುರುಲು!
ನಿನಗೆ ಹಿಡಿದ ಒಳರೋಗಕೆ
ಸೂಜಿ ಮದ್ದು ಸಾಲದು!
ಬೇಕು ಅದಕೆ ಮಾಚಿಕಿತ್ಸೆ

ಒಲ್ಲೆನೆಂದರಾಗದು!
ಉಸ್ಸೆನ್ನುವ ಜನದುಸಿರಿಗೆ
ಬುಸ್ಸೆನ್ನುತ ಹೆಡೆಯನೆತ್ತಿ
ಕಚ್ಚಿ ವಿಷವ ಕಾರುವೆ!
ಹಾಲನುಣಿಸಿ ಹಿತದ ಮಾತ
ಹೇಳಿದವರ ಮರೆಯುವೆ.
ಧರ್ಮಾಂಧರ ಹಣವಂತರ
ಬೆನ್ನು ಕಟ್ಟಿ, ಗುಣವಂತರ
ಬಡಿವ ಭೂತ ಬೆಂತರ!
ರಕ್ತ ಕೋಡಿ ಹರಿಸಿದೆ,
ಮಂತ್ರದರ್ಥವರಿಯದಯ್ಯೊ
ಮೂಢ ಸಂತೆ ನೆರೆದಿದೆ!
ಮಡಿಯ ಮಾಡಿ ಉಡುವೆನೆಂದು
ಬೊಗಸೆ ನೀರು ಸುರುವಿ ಕೊಳಕು
ಪಂಚೆ ತೊಳೆದ ಮಾತ್ರಕೆ
ಅಚ್ಚ ಹಸನುಗೊಳಿಸದಿರಲು
ಮನಕೆ ಶುಭ್ರವೆನಿಸದಿರಲು
ಮಡಿಯಾಯಿತೆ ಪೂಜೆಗೆ?
ಅದರೊಳುಳಿದ ಜಿಡ್ಡಿನಂತೆ
ನೀನು ಕೂಡ ಮಡ್ಡನಂತೆ,
ತಿಳಿಯೊ ಮೊದಲು ತತ್ತ್ವವ
ಅದರ ಮೂಲ ಸತ್ತ್ವವ!

೪

ಅಧಿಕಾರದ ಅಮಲಿನಲ್ಲಿ
ಮೂಢ ಜನರ ಬೆಂಬಲದಲಿ
ಹೆಸರು ಪಡೆವ ಹಂಬಲದಲಿ
ಅರಿಯದಂಥ ಕುನ್ನಿಗಳನು
ನುಂಗಿ ನೀರು ಕುಡಿದಿಹೆ!
ತೀರಲಿಲ್ಲ ಆ ಪಿಪಾಸೆ
ಟೊಣೆಯುತಿರುವ ಈ ದುರಾಶೆ -
ವಿಶ್ವಪ್ರೇಮ ದಿವದ ಬಯಕೆ -
ಗೆಲ್ಲಕೀಲಿ ಜಡಿದಿಹೆ!
ನೊಂದರೂನು ಕರುಣೆ ಬಂದು
ಪರಿಪರಿಯಲಿ ಹೇಳುವೆ;
ಕೇಳಲಾರೆಯಾದರಿನ್ನು
ಭೀಮಗದೆಯನೆತ್ತುವೆ!
ನೂರು ದೂರು ಕೇಳುತಿರುವೆ
ನಿತ್ಯ ನಾನೆ ನೋಡುತಿರುವೆ

ಇನ್ನು ಬರಿದೆ ತಾಳಬಹುದೆ ಇಂಥ ನರಕಯಾತನೆ
ಕಣ್ಣಮುಂದೆ ನಡೆಯುತಿರಲು ಋತದ ಶಿವದ ಭರ್ತ್ಸನೆ!
ಎನಿಸು ಕಾಲ ನಡೆಸಬಹುದು ಘೋರ ಆತ್ಮವಂಚನೆ
ಅದಕೆ ಕೊಡುವೆನಿಂದು ಕೊನೆಯ ಎಚ್ಚರಿಕೆಯ ಸೂಚನೆ :

ಹರೆಯದೇರು ಗರುವದಲ್ಲಿ
ಉದ್ರೇಕದ ಮಬ್ಬಿನಲ್ಲಿ
ಕೈಲಾಗದ ಕನಸನುಂಡು
ಮೈಯನೆಲ್ಲ ಪರಚುತಿರುವ

ಕನಲಿ ಕೆಂಡವಾಗುತಿರುವ
ಅಪ್ರಬುದ್ಧ ಬುದ್ಧಿಹೀನ -
ನೆಂದು ಹಳಿಯಬಹುದು ತುಳಿಯಬಹುದು ಆದರೆ -
ಅರಿವು ಮರವೆಯಾದರೂ
ನಾವು ನೀವು ಅಳಿದರೂ
ಉಳಿದೆವೆಂದು ತಿಳಿದರೂ

ಸತ್ಯವೊಂದು ನಿತ್ಯವಾಗಿ ಗೆಲ್ಲುವದೋ ಬಾಳನು!
ಪಂಜು ಹಿಡಿದು ಹೊರದೆಗೆವುದು ಕೆಟ್ಟ ಕೀಳು ಕಿಲುಬನು!
ಪಾಳ್ಮಸಗಿದ ನೆಲದೊಳಂದು ಮಾಮಸಕವೆ ನಡೆವುದು
ಭೂತ ವರ್ತಮಾನ ನಡೆದ ಕಥೆಯನೆಲ್ಲ ಪೇಳ್ವುದು..
ಹೊಸತು ಬಾಳ ಹೊಸತಿಲಲ್ಲಿ ಅದೋ ಯುವಕ ವೃಂದವು
ಕೋಟಿ ಹೃದಯ ನಾಟಿ ತಂತ್ರಿ ಮೀಟಿ ಬರುವ ಬಯಕೆಯು
ಒಳಗೆ ಕುದ್ದು ಕುದ್ದು ಅದನೆ ಮೆದ್ದ ಉಗಿಯ ಶಕ್ತಿಯು

ಬೆಂಕೆಯಾಗಿ ಜಿಮ್ಮಿ ನಿನ್ನ
ಜ್ವಾಲೆಯಾಗಿ ಸುಡುವ ಮುನ್ನ
ಒಳಗು ಹೊರಗನೆಲ್ಲವಿಂದೆ
ತೊಳೆದುಕೋ ಸಮಾಜವೆ!
ಧ್ಯೇಯವಾದಿಗಳನು ತುಳಿಯೆ
ನಿನ್ನ ನೀನೆ ಕೊಂದು ಕೊಳುವೆ
ಸುಟ್ಟು ಬೂದಿಯಾಗುವೆ!

ಕೆಲವು ಕಾಲ ಮೆರೆಯಬಹುದು ನಿನ್ನ ಉಬ್ಬಿದಬ್ಬರ
ಇಂದು ಕಟ್ಟು ಕಟ್ಟಳೆಗಳ ನಿಗಳ ಕಳಚು ಚಚ್ಚರ!
ಮಸೆದ ಗಂಡುಗೊಡಲಿ ಕೆರಳಿ ಕೊಟ್ಟ ಕೊನೆಯ ಎಚ್ಚರ!
ಎನಿತೊ ಕಾಲ ಮೆಣಸನರೆದ ತಲೆಯ ತಿಂದ ಬೆಂತರ!

ರೈಲು ಬಂಟ

“ಹಿಂದಿನಳಲ ಮರೆತುಬಿಡು
ಇಂದು ಅಡಿಯ ಮುಂದಕಿಡು
ಇಡು, ಇಡೂ ಇಟ್ಟುಬಿಡೂ”
ಎನುತ ಗಾಡಿ ಓಡುತಿಹುದು ಓಡುತಿಹುದು ಮುಂದಕೆ!
ಮುಂದಕಿಟ್ಟ ಹೆಜ್ಜೆಯಿನಿತು ಸರಿಸದಂತೆ ಹಿಂದಕೆ!
ತಂತಿ ಕಂಬ
ಗಿಡದ ಸಾಲು
ದಾಟಿ ನುಗ್ಗುತಿಹುದು ರೈಲು
ದಾರಿ ಸವೆಯೆ ಮೈಲು ಮೈಲು
ಕಣ್ಗೆ ತಂಪನೀಯುತಿಹುದು ಹಸುರು ಹುಲ್ಲುಗಾವಲು
ಮೋಹವೆರಚಿ ಬಿಸಿಲ್ಗುದುರೆ ಕುಣಿಯುತಿರಲು ಸುತ್ತಲು,
ಅಲ್ಲಿ ಮೇವ ದನದ ಹಿಂಡು
ಓಡಿ ಬರುವ ಗಾಡಿ ಕಂಡು
ಮೃತ್ಯು ಕುಣಿದು ಬಂದಿತೆಂದು ಚಂಗನೆದ್ದು ನೆಗೆದಿವೆ!
ದೂರದಲ್ಲಿ ಶೈಲ ಶಿಖರ
ಬುಗುರಿಯಂತೆ ತಿರುಗಿದೆ;
ಅದರ ಮೇಲೆ ನೆಳಲು ಬಿಸಿಲ ಕೈಯ ಹಿಡಿದು ಸಾಗಿದೆ!
ಕವಿಯ ಭಾವ ಕಾವುಗೊಂಡು
ಕವಿತೆಯಲ್ಲಿ ಮುಕ್ತಿ ಪಡೆದು
ಶಾಂತ ನಿದ್ರೆಗೈಯುವಂತೆ ಮೋಡ ಹಾಗೆ ತೇಲಿದೆ.
ದುಡುಂ ದುಡುಂ
ಬೀಳ್ವೊಡಂ
ಗಾಳಿ ಮಳೆಯು ಪೊಯ್ವೊಡಂ
ನೆಲವನಗಿದು ಬಗಿಯುವಂತೆ

ಬೃಹದ್ ಬಯಲು ಬಿರಿಯುವಂತೆ
ಕ್ಷಿತಿಜದಂಚ ನಿರಿಯುವಂತೆ
ಬಿಡುಗಡೆಗೆದೆ ತುಡಿಯುವಂತೆ
ಕಿಡಿ ಕಿಡಿ ಕಿಡಿ ಕಾರುತ !
ಸಿಡಿ ಸಿಡಿ ಸಿಡಿದೇಳುತ!
ರೈಲು ಯಂತ್ರ ಕ್ರಾಂತಿ ಮಂತ್ರ ಘೋಷಿಸುತ್ತ ಸಾಗಿದೆ!
ತನ್ನ ಬೆನ್ನು ಬಿದ್ದ ಜನಕೆ ಅಭಯ ಹಸ್ತ ನೀಡಿದೆ.
ಲೋಹದೆರಡು ಹಳಿಗಳುದ್ದ
ಗಾಲಿಯುರುಳಿ ಉರುಳುತಿರಲು
ನೆಲದ ಎದೆಯು ನಡುಗುತಿರಲು
ನಿಮಿಷಕೊಂದು ನೂರು ಹೆಜ್ಜೆ
ಇಡುವಕಾಂಡ ತಾಂಡವ!
ಮೂರ್ತಿವೆತ್ತ ಭೈರವ!
ದಿಕ್ತಟಗಳ ಬಿರಿಸುತಿಹುದು ಇದರ ರೌದ್ರ ಆರವ!
ಗುರಿಯನೇರ ದಾರಿಗುಂಟ
ನುಗ್ಗುತಿಹನು ರೈಲು ಬಂಟ
ದುಡಿಮೆ ದುಡಿಮೆ ದುಡಿಮೆಯೆಂದು
ಹೊಟ್ಟೆ ಹೊಟ್ಟೆ ಬಡಿದುಕೊಂಡು
ಕಲ್ಲಿದ್ದಲಿ ನುಂಗಿಕೊಂಡು
ನಿಟ್ಟುಸಿರಿನ ಕರ್ಬೊಗೆಯದು ಕಾಳೋರಗವಾಗಿರೆ
ತಿದಿಯೊತ್ತುತ ಪೂತ್ಕರಿಸುತ ಗಾಳಿಯ ಮೇಲ್ವಾಯ್ದಿರೆ
ಸಿಡಿಗುಂಡಿನ ಸೇಡಿನಂತೆ
ಬಿಲ್ಜಾಣನ ಬಾಣದಂತೆ
ರೈಲು ಬಂಟನೋಡುತಿಹನು ಓಡುತಿಹನು ಮುಂದಕೆ
ಕರ್ತವ್ಯದ ಭಾರವಿಳಿಸೆ ನಿಲ್ದಾಣದ ಸನಿಹಕೆ
ನಾವು ನೀವು ಅಗಲಿ ಕೂಡಿ ಅತ್ತು ನಗುವ ತಾಣಕೆ!

ಅಂಚೆಯಾಳು

೧

ಅಂಚೆಯಾಳು ಬಂದನೇನು?
ತಂದನೇನು ಓಲೆಯ?
ಮನವ ಕೊಂಡು ಕೊನೆವ ಒಲವು ಸಮೆದ ನುಡಿಯ ಮಾಲೆಯ?
ಕಳುಹಲಿಲ್ಲವೇನು ಗಾಳಿಯೊಡನೆ ಬಯಲಿನಾಲಯ?
ಅವನ ಬರವ ಹಾರೈಸುತ
ಯೋಚನೆಯೊಡನೋಲವಿಸುತ
ಬಂಧು ಬಳಗವೆಲ್ಲವಿಲ್ಲೆ ಎದೆಗೆ ಬಿಜಯಗೈಸುತ
ದೂರ ಸಾರಿ ಹೋದ ಗೆಳೆಯರೊಲವಿಗಿಂತು ತಪಿಸುತ
ಖಿನ್ನನಾಗಿ ಬಿನ್ನಗಾಗಿ ಮುದುಡಿಕೊಂಡು ಕುಳಿತಿಹೆ;
ನನ್ನ ನಾನೆ ಮರೆತಿಹೆ!

ನೆನಹು ಕೋದ ಜಪಮಣಿಯನು
ಎಣಿಸುತಿರುವ ವಿರಹಿಣಿ
(ತಾನೆ ತನ್ನ ಅರಗಿಣಿ!)
ಎಂತುಟಾಸೆವಟ್ಟು ಮೂಗವಟ್ಟು ಕುಳಿತು ನೆನೆವಳೊ
ಅಂತುಟಾಸೆ ನನಗೆ ಅಂಚೆಯವನದೇಕೆ ಬಾರನೊ!
ಸುದ್ದಿಯೊಂದ ತಾರನೊ!

೨

ಬಾಲ್ಯದೊಂದು ಚಿಕ್ಕ ಕೃತಿ
ಅದರ ಮಧುರ ವಿಸ್ಮೃತಿ:
ಅಂಚೆಮನೆಯು ಇರದ ಹಳ್ಳಿ

(ಸುತ್ತು ಮುತ್ತು ಡಬಗಳ್ಳಿ)
ಅಲ್ಲಿ ವಾರಕೊಮ್ಮೆ ಬಂದು
ಮುದ್ರಾಂಕಿತ ಪತ್ರ ತಂದು
ಹಂಚುತಿದ್ದ ಅಂಚೆಗಾರ;
ನಮ್ಮ ಊರಿಗವನು ದೇವದೂತ ವಿವಿಧ ಸುದ್ದಿಸಾರ-
ಖಾಕಿ ಚಣ್ಣ,
ಬಗಲ ಚೀಲ,
ಹೆಗಲಿನಿಂದ ಜೋತ ಕೊಡೆ,
ದೊಡ್ಡ ಹೆಜ್ಜೆ ಬೀಸು ನಡೆ, -
ಅವನ ನಗೆಯ ಬಗೆಯ ಕಂಡು
ಕೈಯ ಚಾಚಿ ಪತ್ರ ಕೊಂಡು
ಓದುತಿರಲು, ಮನೆಯ ತುಂಬ ಹರುಷದೊಂದು ಹಬ್ಬವು!
ಅಂದಿನಂದ ಬಿಸವಂದದ ದಿನಗಳಿನ್ನು ಬಾರವು.

೩

ಇಂದು ಯಾವ ಆಸರ?
ಶಾಂತಿಗಾಗಿ ಬಾಯಾರಿದೆ; ಬೇರೂರಿದೆ ಬೇಸರ!
ನಿದ್ದೆಯಿರದ ಆಕಳಿಕೆ
ಎತ್ತಲೂನು ಮಗ್ಗಲೂರಗುಡಲಾರದ ಬಳಲಿಕೆ!
ನನಗೆ ಮರಹು ಅಲಸಿಕೆ
ಎಡೆಗೊಂಡಿದೆ; ನಡುವೆ ಮೌನವೆಳೆದಂತಿದೆ ಜವನಿಕೆ.
ಗೆಳೆಯರೆಲ್ಲ ಶಪಿಸಿ ಬರೆಯಲವರ ಕೋಪತಾಪಕೆ
ಸಣ್ಣದೊಂದು ಓಲೆ ಕೂಡ ಬರೆಯೆನವರ ಶಮನಕೆ!
ಹೊತ್ತನೆಲ್ಲ ವ್ಯರ್ಥಗಳೆವ ಅರ್ಧಮರ್ಧ ಸಾಹಸಿ
ಅಯ್ಯೊ ನಾನು ಆಲಸಿ!

ಇನ್ನು ನನ್ನ ಮನ್ನಿಸಿ.
ಆದರೂನು ಕಾಯುತಿರುವೆ,
ಯಾರಾದರೊಂದು ಓಲೆ
(ಇರಲಿ ಬರಿಯ ಎರಡು ಸಾಲೆ)
ಬಾರದೇನು? ತಾರದೇನು ಸ್ನೇಹಗೊಂಡ ಸೂತ್ರವ?
ಕಣ್ಣ ಮುಂದೆ ಕುಣಿಸದೇನು ಬಣ್ಣಗೊಂಡ ಪಾತ್ರವ?
ಲಿಪಿಯೋದ್ಭವರಾಗಿ ಇಳಿಸರೇನು ಮೌನಭಾರವ?
ಎಂದಿಗೇನು?
ಅಂದು ಇಂದು
ಅಂಚೆಯಾಳು ನನ್ನ ಬಂಧು.
ನನ್ನ ಆಸೆ ಒಂದೆ ಒಂದು;
ಓಲೆ ಬರಲಿ
ಬಾರದಿರಲಿ
ಅಂಚೆಯವನು ಮಾತ್ರ ದಿನವು
ನನ್ನ ಕಣ್ಣೆದುರು ಬಂದು ನಕ್ಕಾದರು ಹೋಗಲಿ.

ಶ್ವೇತಪುತ್ರಿ

ಗಾಳಿಯ ಬೆರಳಿಗೆ ಬೆಳ್ಳಿಯ ಉಂಗುರ
ತೊಡಿಸುತ ಬರುತಿಹ ಒಯ್ಯಾರಿ!

ಹೊಗೆಯ ಸುರುಳಿಗಳ ಅರಳಿನ ಮಾಲೆಯ
ಕೊರಳಿಗೆ ಸೂಡುವ ಸುಕುಮಾರಿ!

ಬಿಳಿಯ ಪತ್ತಲದ ತೆಳ್ಳನೆಯುಡುಗೊರೆ
ಕೆಂಗಿಡಿ ಕೆಂಬರಳಿನ ನತ್ತು!

ನಿರಾಭರಣ ಸುಂದರಿ ಸುವಿಲಾಸಿನಿ
ಕಲಿಸಿದರಾರೀ ಹೊಸಗತ್ತು?

ಸುಳಿಗಾಳಿಗೆ ಬಲು ಬಳುಕುತ ನಟಿಸುವ
ಒಪ್ಪಿಡಿ ನಡುವಿನ ಹೊಗೆ ರಾಣಿ!

ಒಂದೇ ಸೆಳೆತಕೆ ತುಟಿಗಳ ಮುದ್ರಿಕೆ
ನಿನ್ನಯ ಹೆಸರೇ "ಜೇನುಹನಿ"

ಮೊದಮೊದಲಿಗೆ ಹಿರಿಕಿರಿಯರಿಗಂಜುತ
ಕಟ್ಟೇಕಾಂತದಿ ನೀನೊಲಿದೆ;

ಕಿತ್ತಿಳೆ ತೊಳೆ ತುಟಿ ಮಧುರಿಮೆ ಹೀರಲು
ಮುತ್ತಿನ ಸತ್ತಿಗೆ ನೀನಾದೆ!

ಎಂದಾದರು ನೀನಿರದಿರೆ ಬರದಿರೆ
ವಿರಹದಿ ಕೊರಗುವೆನೇಕಾಕಿ;

ಜುರಿಯೊಂದೆಳೆತಕೆ ಯೋಚನೆ ಮಾಲಿಕೆ
ಭಾವೋದ್ರೇಕವು ಧೂಮ್ರಾಕ್ಷಿ!

ಚಿತ್ರ ವಿಚಿತ್ರದ ಹೊಗೆಗೆರೆ ಮೂಡಿಸಿ
ಸೂತ್ರದ ಗೊಂಬೆಯನಾಡಿಸುವಿ,

ಬಯಲೊಳು ಧೂಮಸ್ತೂಪವ ನಿಲ್ಲಿಸಿ
ಬಾನ್ನೆಲವನ್ನಾಲಿಂಗಿಸುವಿ!

ಧೂಮ್ರಪಾನದೀ ಧೂಪಾರತಿಯೊಳೆ
ಜ್ಞಾನೋಪಾಸನೆಗೆಯ್ಯಿಸುವಿ

ಧ್ಯಾನದಿ ಮನನದಿ ವೈನತೇಯನೊಲು
ಅಮೃತಾಚಲವನ್ನೈದಿಸುವಿ!

ಗುರಿನಿರಿಯಿಲ್ಲದ ಗರಿಗರಿ ಮೋಡದ
ಸರಿದೊರೆಯಾಗಲು ಹೆಣಗುತಿಹೆ;

ಸುಂಟರಗಾಳಿಯ ಬಂಟನ ದಾಳಿಗೆ
ಕಂಟಣಿಸುತ ಕರಕರಗುತಿಹೆ!

ಮೋದದಿ ಸೇದಲು ಸೊದೆಯನು ಕುಡಿಸುವೆ
ಎದೆಯುರಿ ಸಹಿಸುತ ಕಲ್ಯಾಣಿ!

ಬಿಳಿಹೊಗೆ ಬೆಳ್ಗೊಡೆ ಚಾಮರದಡಿಯಲಿ
ಹಾಡಿ ಹರಸುವಳು ಗೀರ್ವಾಣಿ!

ಶಿವ ಶಿವ ಶಂಭೋ ಚೆಲುಮೆಯ ತುಂಬೋ
ನಾನೆ ಸ್ವಯಂಭೂ ಇನ್ನಿಲ್ಲ!

ಬಾರಿಸು ಡಮರುಗ ಕುಣಿಯಲಿ ಭೃಂಗಿಯು
ಕೈಲಾಸದ ಸುಖ ಬೇರಿಲ್ಲ!

ಕಿತ್ತೂರ ಕೋಟೆಯನ್ನು ಕಂಡು

ಭೂತಕಾಲದ ಗರ್ಭದಲ್ಲಡಗಿ, ಮೈಯುಡುಗಿ,
ಗಹಗಹಿಸಿ ನಗುವ ಕಾಲನತ್ಯದ್ಭುತ ದವಡೆ -
ಯೊಲು ತೋರುತಿದೆ ಕಿತ್ತೂರ ಬಲ್‌ಕೋಟೆ ಗೋಡೆ!
ಅಲ್ಲಲ್ಲಿ ಬೆಳಕಳಿದ ಬೆಳಕಿಂಡಿಯಲಿ ನುಗ್ಗಿ,
ಗೋಳಿಡುವ ಅಪಸ್ವರದಂತೆ ಬಿಸುಸುಯ್ಯುತಿದೆ
ಗಾಳಿ, ವೈತಾಳಿ! ಗಿಡಗಂಟಿ ಕೊನ್ನಾರದಲಿ
ಗೂಡು ಕಟ್ಟಿಹ ಹಕ್ಕಿ ರಣಗುಡುವ ಬಿಸಿಲಿನಲಿ
ಗತಕಾಲವನು ಕುರಿತು ಬಿಕ್ಕಿ ಬಡಬಡಿಸುತಿವೆ!
ಕಾರ್ಮೋಡದೊಲು ನುಗ್ಗಿ ಬೇಟೆಯಾಡಿದ ವೈರಿ
ಸೈನ್ಯದಲಿ ಮುಂಗಾರ ಮಿಂಚಿನೊಲು ರಣತೇಜಿ-
ಯನ್ನೇರಿ, ಕಾವೇರಿ, ಅಮಮ! ಚೆನ್ನಮ್ಮಾಜಿ
ತುಡುಕುತಿರಲರರೆ! ಏನಾಯಿತಾಯಿತು ಪಿತೂರಿ!
ಪುಟ್ಟದಿರಲಿನ್ನುಮೀ ನಾಡಿನಲಿ ವಂಚಕರ್,
ನರಕುನ್ನಿ ಪಾತಕರ್, ವಿಶ್ವಾಸಘಾತಕರ್!

ಕಿತ್ತೂರಿನ ಕಿಡಿಗಳು

ಗುಣದಲ್ಲಿ ಗೌರಿ, ಕೆಚ್ಚೆದೆಯಲ್ಲಿ ಚಾಮುಂಡಿ,
ಕ್ರೂರ ದಬ್ಬಾಳಿಕೆಗೆ ಬಿಚ್ಚುಗತ್ತಿಯ ಹಿಡಿದು
ಕಿತ್ತೂರ ರಾಣಿ, ಬಜ್ಜರದ ಕಿಡಿ! ಮಾರ್ಪೊಳೆದು
ಭೀರು ಭೀರುಗಳೆದೆಗೆ ಬೀರ ಚೇತನೆಯೂಡಿ
ಉಬ್ಬರಂಬರಿದು ಬಡಿದೆಬ್ಬಿಸಿದ ಕಾವಿನಲಿ
ಮೈದುಂಬಿ ಮೇಲೆದ್ದ ಯೋಧಪಡೆ, - ಸಂಗೊಳ್ಳಿ
ರಾಯಣ್ಣ ನಾಯಕಂ! ಇಕ್ಕಿದರು ಕೆಂಗೊಳ್ಳಿ
ಆಕ್ರಮಣ ಶೀಲರ್ಗೆ! ಕೌಟಿಲ್ಯ ಜಾಲದಲಿ
ಸೆರೆಯಾಗಿ, ಸಾವಿಗೀಡಾಗಿ, ಶೂಲಕ್ಕೇರಿ
ನಗುನಗುತ ಹರಣಮಂ ತೊರೆವ ಕೊನೆ ನಿಮಿಷದಲಿ
ಅವರ ತೇಜದ ಬೀಜ ಕನ್ನಡದ ಮಣ್ಣಿನಲಿ
ಮೊಟ್ಟ ಮೊದಲಿಗೆ ಮೊಳೆಯಿತ್ತೈ ಬಾವುಟವನೂರಿ!
ಮೊದಲು ನೆನೆಯಿರಿ ಅವರನಾ ಪರಾಕ್ರಮಿಗಳಂ !
ನಾಡಗುಡಿ ಕೀರ್ತಿ ದುಂದುಭಿ ನಿನದ ಪಾತ್ರರಂ!

ಕ್ರಾಂತಿಕಲಿ

ಮುಗಿಲ ಮರೆಗಿರುವ ಮಿಂಚಿನಬಳ್ಳಿ ಗಗನದಂ-
ಚಿಗೆ ತನ್ನ ಕುಡಿನಾಲಗೆಯ ಚಾಚಿ ಕತ್ತಲೆಯ
ತುತ್ತುವೊಲು ಸಾಮಾನ್ಯದಲ್ಲು ಅಸಮಾನತೆಯ
ಕಿಡಿಯೊಂದು ಅರಿಯದೊಲು ಅಡಗಿಹುದು ಕೃತುಬಲಂ!
ಜನಜೀವನದ ಉಗ್ರ ಜಾಗೃತಿಯ ಬಿರುಗಾಳಿ
ಬೀಸಲದೆ ಪ್ರಜ್ವಲಿಸಿ, ಕ್ರಾಂತಿಕಲಿಗಳ ಕೈಯ
ಪಂಜಿನೊಲು ಪರಿಸರವ ಪ್ರತಿನಿಧಿಸಿ ಹೆಗ್ಗುರಿಯ
ತೋರುವುದು! ಭಾರತದ ಬಿಡುಗಡೆಯ ಬವರದಲಿ.
ಕನ್ನಾಡ ವೀರ ವಾಲಿಯ ದಂಡು ಕಾಳೆಗದ
ಮುಖದಲ್ಲಿ ಮಸಗಿದುದು - ಕಣ್ಣೆವೆಯ ಮುಚ್ಚಿ ತೆರೆ -
ವನಿತರೊಳೆ ಅಚ್ಚರಿಯ ಕೃತಿನೂರು ಬೆಟ್ಟದೊರೆ!
ಪಡೆವಳನಸೀಮ ಸಾಹಸ ನಾಡ ಬಾವುಟದ
ಹೆಮ್ಮೆ ; ಧೃತಿಗೆಡದ ಕೃತಿವೀರನೇಗಳು ಗೆಲ್ಗೆ!
ನಾಡಸೇವೆಯಲಿಂತು ಉತ್ಸಾಹದಿಂ ಬಾಳ್ಗೆ.

ಪ್ರಜಾಪ್ರಭುತ್ವ

ಮುಳುಗುತಿಹ ನೇಸರನು ಮುದಿಸಿಂಹನಂತಾಗಿ
ಪಶ್ಚಿಮಾದ್ರಿಯ ಗವಿಯ ಸೇರುತಿಹನು;
ತನ್ನ ಸರ್ವಾಧಿಕಾರಿತ್ವ ಕೊನೆಗೊಳ್ಳುತಿರೆ
ಲೋಗರೆಡೆ ಕೆಕ್ಕರಿಸಿ ನೋಡುತಿಹನು!

ಸಂಜೆ ಕಕ್ಕರಮಬ್ಬು ಗಗನ ಸಿಂಹಾಸನದಿ
ಕಪ್ಪು ಬಾವುಟವೆತ್ತಿ ತೋರಿಸಿಹುದು-
ಪಕ್ಷಿಸಂಕುಲ ಕೆಲೆದು ಬಿಡುಗಡೆಯ ಹಿಗ್ಗಿನಲಿ
ಹಾಡಿ ಜಯಜಯಕಾರ ಗೈಯುತಿಹುದು.

ಹಗಲ ಉರಿವಿಸಿಲ ಸಾಮ್ರಾಜ್ಯಶಾಹಿಯು ಉರುಳಿ
ಪಡುವ ಕಡಲಿನ ಹಡಗವೇರುತಿರಲು
ಸಂಧ್ಯಾ ಸಮೀರನದೊ ಸ್ವಾತಂತ್ರ್ಯ ಸಂದೇಶ
ಹೊತ್ತು ನಾಲ್ದೆಸೆಗಳಲಿ ಹರಡುತಿಹನು.

ಬಿತ್ತರದ ಬಾನಿನಲಿ ಮತ್ತೆ ಜನತಾ ರಾಜ್ಯ
ಮೆರೆಯುತಿದೆ ಚಿಕ್ಕೆಯ ಪ್ರಜಾಪ್ರಭುತ್ವ
ವ್ಯಕ್ತಿ ಶಕ್ತಿಯ ಗುಣವಿಕಾಸ ಪ್ರಕಾಶದಲಿ
ಜಗವ ಬೆಳಗುವುದದರ ಮೂಲತತ್ತ್ವ.

ಆಕಾಶಗಂಗೆ ಶಾಸನ ಸಭೆಯನೇರ್ಪಡಿಸಿ
ಮಂತ್ರಿಮಂಡಲವನ್ನು ನಿರ್ಮಿಸಿಹುದು:
ಬುಧ ಬೃಹಸ್ಪತಿ ಶುಕ್ರ ಶನಿ ಮಂಗಳಾದ್ಯರನು
ವಿವಿಧ ಮಂತ್ರಿಗಳಾಗಿ ನೇಮಿಸಿಹುದು.

ಕೃತ್ತಿಕೆಯು ಮೃಗಶಿರವು ಸಪ್ತರ್ಷಿ ಮಂಡಲವು
ರಾಜಕೀಯದ ಪಕ್ಷಪಂಗಡವೆನೆ
ದಕ್ಷಿಣೋತ್ತರ ಧ್ರುವದ ರಾಯಭಾರಿತ್ವದಲಿ
ಮುಖ್ಯಮಂತ್ರಿಯು ಚಂದ್ರನಾಗಿರುವನೆ?

ಬಿಡುಗಡೆಯ ಸೌಭಾಗ್ಯ ಪಡೆದ ಬಾನಿನೊಳಿಂತು
ಶಾಂತಿ ಸಮದರ್ಶಿತ್ವ ತಂಪಿನಿರುಳು -
ಬಡವ ಬಲ್ಲಿದರೆನದೆ ಸಮತೆಯಲಿ ತಣಿಸಿಹುದು
ಸರ್ವರಿಗು ಸಮಪಾಲು ಬೆಳದಿಂಗಳು!

ಕ್ಷಣಬಂಧುರ

‘ಸೋ’ ಎಂದು ಸುರಿವ ಮಳೆ
ಉನ್ಮಾದಗೊಂಡ ಇಳೆ!
ಸೀಯೆನೆ ಸೊದೆಯನೀಂಟ ಓಲಾಡುತಿರುವ ಬೆಳೆ
ತೋರ ಮುತ್ತಿನ ಹನಿಯ ಝುಲ್ಲರಿಯ ಮಾಲೆ!
ತರುಮರಾದಿಗಳಲ್ಲಿ ಗಾಳಿ ನಿಶ್ಯಬ್ದ!
ಮನೆಮಾರು ಗಿರಿದರಿಗಳಲ್ಲಲ್ಲೆ ಸ್ತಬ್ಧ,
ಎಲ್ಲವೂ ಬಿರುಮಳೆಯ ಮಂತ್ರದಲಿ ಮುಗ್ಧ.
ಕೊಳೆಯನೆಲ್ಲವ ಕೊಚ್ಚಿ ತೇಲಿಸಿದೆ ಹೊನಲು
ಗಾಳಿಯೂ ಕರಕರಗಿ ನೀರಾಯಿತೆನಲು
ದಂಡೆತ್ತಿ ಬರುತಿರುವ ಮೋಡಗಳ ಸಾಲು
ಸೋತವರ ಸೊತ್ತೆಲ್ಲ ಗೆದ್ದವರ ಪಾಲು!
ಒಂದೆ ಚಣ!
ಮಾಯೆ ಬೀಸಿದುದತ್ತ ಇಂದ್ರಜಾಲ!
ಬಾನಿಳೆಯ ಉನ್ಮತ್ತ ಬೆಸುಗೆ ಹಿಲ್ಲೋಲದಲಿ
ಜನಮನವು ಸ್ವಪ್ನಲೋಲ!
ಮತ್ತೊಂದೆ ಚಣ
ಮಳೆಯು ನಿಂದತ್ತು
ಸಡಿಲಿತ್ತು ನೆಲ ಜಲದ ಗಾಢಮಿಲನ!
ಮೂಡಿತ್ತು ತಿಳಿನಗೆಯು ಆಗಸದ ಮೊಗದಿ
ಮಾತಿರದ ಮೃದು ಮಧುರ ಮೌನಾವಲೋಕನದಿ
ಸೃಷ್ಟಿಯಲಿ ಹೊಮ್ಮಿತ್ತು ಚಿಮ್ಮುಗಾಲ!
ವರ್ಷ ಋತು
ಹರ್ಷ ಋತು
ಮನುಜ ದುಃಖದಿ ಬೆರೆತು
ತೇಲಿತ್ತು ಮುಳುಗಿತ್ತು ಅನಂತಕಾಲ!

ಕನಸಿನಲ್ಲಿ

ಕರ ಕರ ಕರ ಕೊರೆವ ಚಳಿ
ಕೋಳೀಮರಿ ಕುಯ್ದ ಹಾಗೆ;
ಮರ ಮರ ಮರ ಮರವಟ್ಟಿತು
ಥರ ಥರ ಥರ ಧರೆ ನಡುಗಿತು

ಇರುಳು ಕೆರಳಿ ಹೊಡಮರಳಿತು!
ತಾರೆಯೊಂದು ತಿರೆಗುರುಳಿತು.
ಏನಾಯಿತು! ಏಕಾಯಿತು?
ಎನುತಿರೆ ಓ ರೈಲು ಬಂತು!

ಗಡ ಗಡ ಗಡ ಮೈ ನಡುಗಿಸಿ
ಕಂದರದಲಿ ಕಣ್ಣು ಮುಚ್ಚಿ
ಕಂಬಿ ತಪ್ಪಿ ಉರುಳಿತು,
ಮೂರು ಸಾರೆ ಹೊರಳಿತು!

ಅಬ್ಬಾ, ಅಯ್ಯಯ್ಯೊ ಎಂದು
ನಿಂತ ನಾಲ್ಕು ಜನರು ನಾವು
ಗಾಡಿಯನ್ನು ಮೇಲಕೆತ್ತಿ
ಹಳಿಯ ಮೇಲೆ ಬಿಟ್ಟೆವು.

ಜನರಿಲ್ಲದ ಮಾಲುಗಾಡಿ
ಕೈಬಿಟ್ಟೊಡೆ ಕೈ ಕೊಟ್ಟಿತು
ಎಲ್ಲಿ ಎಲ್ಲಿ ನಿಲ್ಲು ನಿಲ್ಲು
ಎನಲು ನಮ್ಮ ಗುಲ್ಲು

ಹಲ್ಲು ಮಸೆದು ಹೊಟ್ಟೆ ಹೊಸೆದು
ಓಡಿತಯ್ಯ ರೈಲು!

ತೀರ್ಪು

"Judge not that ye be not judged"

- Jesus Christ

ಒಂದು ಸಂಜೆ ಪಿಂಜರಿತಮೇಘ ಪಡುವಣದ ಬಾನಿನಲ್ಲಿ
ಶ್ರೀ ಸ್ವಯಂಭು ವಿಚ್ಛಂದ ಮನದಿ ಕುಳಿತಂತೆ ಲೀಲೆಯಲ್ಲಿ
ಶೋಭಿಸಿರಲು, ಕಣ್ದಿಟ್ಟಿ ಹರಿವವರ ಹಬ್ಬಿದಂಥ ಕಡಲು
ತೆರೆಯನಟ್ಟಿ ತೆರೆ ತೂರುತಿತ್ತು ಹುಡಿ ಚಿನ್ನದಂಥ ಮಳಲು.

ಕಡಲಿನಂಚಿನಲಿ ಸೂರ್ಯಬಿಂಬವಿನ್ನೇನು ಮುಳುಗುತಿತ್ತು
ಕಿರಣರಹಿತ ಕೆಂದಳಿರ ಹಾಸಿದೊಲು ನೀರು ಮಿರುಗುತಿತ್ತು
ಮಂದಗಾಮಿ ತಂಗಾಳಿ ರಯ್ಯನೊಯ್ಯಾರದಿಂದ ಬಂದು
ಮುಟ್ಟಿ ಮುಟ್ಟದೊಲು ತೀಡುತಿತ್ತು ತೆರೆ - ಚುಂಬನಕ್ಕೆ ಸಂದು.

ಯೇಸುಕ್ರಿಸ್ತ ಅಸ್ವಸ್ಥ ಮನದಿ ಕುಳಿತಿದ್ದ ಮಳಲ ತಡಿಗೆ
ಕೆನ್ನೆಗೈಯು ಅರೆದೆರೆದ ಕಣ್ಣು ನಸುಬಾಗು ಮೊಗದ ಬಗೆಗೆ;
ನೂರು ಯೋಚನೆಯ ಗಾಣದಲ್ಲಿ ಮನ ಸಿಕ್ಕು ಗಾಸಿಗೊಂಡು
ಲೋಕಹಿತದ ಚಿಂತನೆಗೆ ತೊಡಗೆ ತನ್ನಲ್ಲಿ ನಿಜವ ಕಂಡು:

ಮತದ ಮೌಢ್ಯ ಕಟ್ಟಳೆಯ ನಿಗಳ ದ್ವೇಷಗಳ ಕಳೆವುದೆಂತು
ಫರಿಸಾಯರವರ ದುರ್ಜಡತೆ ನೀಗಿ ಜನ ನೇರಿತಾಗಲೆಂತು?
ಲೋಕದಿಚ್ಛೆ ನಾ ನುಡಿದು ಸತ್ಯ ಧ್ವಜವೆತ್ತಿ ಹಿಡಿಯಲೆಂತು?
ಒಬ್ಬರೊಬ್ಬರನು ಅರ್ಥಮಾಡಿಕೊಳ್ಳದಿರೆ ಏನು ಬಂತು?

ಇಂತು ಚಿಂತೆಯಲಿ ಮುಳುಗಿ ಯೇಸು ಪ್ರಾರ್ಥಿಸಿದನಾಗ ಮನದಿ:
"ತಂದೆ ತಂದೆಯೇ ಜನರಿಗೊಳ್ಳೆಯದ ತಿಳಿವ ಬುದ್ಧಿ ಭರದಿ

ಬೆಳೆದು, ಸತ್ಯ ಧರ್ಮಾನುಚರಣೆ ಬೇರೂರಿ ಕರುಣೆಯಲ್ಲಿ
ಕೊನೆಗೆ ಎಲ್ಲ ಲಯ ಹೊಂದಲಲ್ಲಿ ವಿಶ್ವಾತ್ಮ ಪ್ರೇಮದಲ್ಲಿ".

ಅದೇ ಸಮಯ ಫರಿಸಾಯರೇಸುಗವಮಾನ ಮಾಡಲೆಂದು
ಹೊತ್ತು ಕಾದು ನವಯುವತಿ ಮುಡಿಯ ನಿಡುಗೂದಲನ್ನು ಹಿಡಿದು
ಹುಲಿಯು ಚಿಗುರೆಯನು ಎಳೆವ ತೆರದಿ ದರದರನೆ ಎಳೆದು ತಂದು
ಕಲ್ಲು ಮುಳ್ಳಿನಲಿ ಹಾಸಿಬೀಸಿ ಯೇಸುವಿನ ಮುಂದೆ ಬರಲು

ಊರು ಮಗ್ದಲಾ, ಹೆಸರು ಮೇರಿ ಏನೆಂಥ ರೂಪರಾಶಿ!
ಕಪಟರಹಿತೆ ದೀನಾಸ್ಯೆಯಾಗಿ ಪಾಷಂಡಿಗಳಿಗೆ ರೋಸಿ
ಚಿಂದಿ ಬಟ್ಟೆ, ಮೈಯೆಲ್ಲ ಘಾಯ ಚೀರಿಡುವ ಗೋಳು ಕೇಳಿ
ಕರಗಲಿಲ್ಲ ಎದೆ, ಮರುಗಲಿಲ್ಲ ಮನ ಅವರಿಗದುವೆ ಹೋಳಿ.

ಪ್ರಾಣಸಂಕಟದಿ ಕೆಡೆದು ಬಿದ್ದ ಮಗ್ದಲದ ಕುವರಿ ಮೇರಿ
ಹಿಂದೆಯೊಮ್ಮೆ ಕಂಡಿದ್ದಳವನ ಆ ಸ್ವಾಮಿ ಗುಡ್ಡವೇರಿ
ಜನರ ಗುಂಪಿಗುಪದೇಶಗೈವ ದಿನ ತಾನು ನಿಂತು ಕೇಳಿ
ತೃಪ್ತಿಹೊಂದಿ ಹೋಗಿದ್ದಳಂದು ಇಂದೂನು ಧೈರ್ಯ ತಾಳಿ

ಇಂಥ ಸಮಯದಲಿ ಮತ್ತೆ ಅವನಿಗೆಯೆ ಶರಣು ಹೋಗುವೆನೆಂದು
ರಕ್ತಸಿಕ್ತ ದೇಹವನು ಎಳೆದು ಶ್ರೀಪಾದದೆಡೆಗೆ ಬಂದು
ತಲೆಯನಿರಿಸುತಿರೆ ಸುತ್ತು ನಿಂತ ಮತಿಗೆಟ್ಟ ಜನರ ಗುಂಪು :
ಮರುಳರಂತೆ ಹೋಯೆಂದು ನಕ್ಕು ಮೂದಲಿಸಿ ನುಡಿದರಿಂತು:

"ದೇವಸುತನು ನಾನೆಂದು ನುಡಿಯುತಿಹ ಎಲವೊ ಮೂರ್ಖ ಮರಿಯೆ
ನ್ಯಾಯ ಮತ್ತೆ ಅನ್ಯಾಯಗಳನು ಪರಿಕಿಸುವೆನೆಂಬ ಕುರಿಯೆ
ಸತ್ಯಪ್ರೇಮಗಳ ಬಿತ್ತಲಿಹೆಯ ಉನ್ಮತ್ತ ಮತಿಗಳೊಡೆಯ
ಈಗ ಹೇಳು ಈ ಯುವತಿ ನಡತೆಯಲಿ ಇಹುದು ಯಾವ ನ್ಯಾಯ?

"ಇವಳು ಪಾಪಿ ವ್ಯಭಿಚಾರಿಯೆಂದು ಇದೊ ನುಡಿವರೆಲ್ಲ ಸಾಕ್ಷಿ
ಕಣ್ಣಾರೆ ಕಂಡು ಆರೋಪ ಹೊರಿಸಿ ಎಳೆದಿಹರು ಇಲ್ಲಿ ನೂಕಿ
ಹೇಳು ನಿನ್ನ ತೀರ್ಪೇನು ಇಲ್ಲಿಯೇ ನಿಂತ ಕಾಲ ಮೇಲೆ
ಮೂರ್ಖ ಮಂದಿ ನೀನೊಬ್ಬ ಶ್ರೇಷ್ಠ ಗುರು ಎಂದು ಸಾರಲಿಲ್ಲೆ?"

ಚುಚ್ಚುಮಾತುಗಳನೆಸೆಯುತಿರಲು ಪುಂಖಾನುಪುಂಖವಾಗಿ
ಶಾಂತಚಿತ್ತದಲಿ ಸೌಮ್ಯಭಾವದಲಿ ಕೇಳುತಿದ್ದ ಯೋಗಿ
ತಲೆಯ ಬಾಗಿ ನಿಟ್ಟುಸಿರನಿಟ್ಟು ಸೈತಿಟ್ಟು ಕ್ರಿಸ್ತಸ್ವಾಮಿ
ತನ್ನ ಕಾಲಬಳಿ ಬಿದ್ದ ಮುಗ್ಧೆಯನು ಕಂಡ ವಿಶ್ವಪ್ರೇಮಿ.

ಕತ್ತನೆತ್ತಿ ಯೇಸುವಿನ ಮೊಗವ ನೋಡಿದಳು ಮೇರಿ ತಣಿಯೆ
ಎದೆಯ ದೈನ್ಯ ಕಣ್ಣಿನಲಿ ಬಂದು ಕಂಬನಿಗಳಾಗಿ ಹರಿಯೆ
ತನ್ನ ದುಃಖವನು ತೋಡಿಕೊಳ್ಳುವರೆ ಮಾತು ಬಾರದಿತ್ತು
ಮೂಕಶೋಕದಲಿ ಒಡಲ ಭಾಂಡ ಒಳಗೊಳಗೆ ಕುದಿಯುತ್ತಿತ್ತು.

ಆದರವಳ ಜೀವಾತ್ಮ ಶೋಕ ಪರಮಾತ್ಮನೆದೆಯಸೇರಿ
ಮೌನವೀಣೆ ಮಿಡಿದಂತೆ ತಂತಿ ಸಿಡಿದಂತೆ ದನಿಯ ಬೀರಿ:
"ನನ್ನ ಸ್ವಾಮಿ ಓ ಯೇಸುಕ್ರಿಸ್ತ ಪ್ರಭು ಕರುಣೆಸೆನ್ನ ತಂದೆ
ನಾನು ಮಾತ್ರ ಅರಿಯದೆಯೆ ಗೈದ ಅಪರಾಧ ಮನ್ನಿಸೆಂದೆ"

ಎಂದು ನೊಂದು ಪರಿತಪಿಸಿ ಆತ್ಮ ನೈವೇದ್ಯ ನೀಡಲಾಗಿ
ಅವನ ಕಣ್ಣಿನಲಿ ಕ್ಷಮೆಯು ರಮಿಸಿ ಬರೆ ಶಾಂತಚಿತ್ತಳಾಗಿ
ಮತ್ತೆ ಮತ್ತೆ ಆ ದಿವ್ಯ ಮೊಗದ ಸಂಪದವ ನೋಡಿ ನಂಬಿ
ಕಣ್ಣು ತುಂಬಿ ಎದೆದುಂಬಿ ತಲೆಯ ಬಾಗಿದಳು ಜೀವ ತುಂಬಿ.

ತಲೆಯನೆತ್ತಿ ಕಣ್ದೆರೆದು ಯೇಸು ನೋಡಿದನು ನೆರೆದ ಜನವ
ಧೈರ್ಯವಾಗಿ ಗಂಭೀರನಾಗಿ ಪ್ರಶ್ನಿಸಿದನವರ ಮನವ:
ನಿಮ್ಮ ಧರ್ಮಶಾಸ್ತ್ರದಲಿ ಇದಕೆ ಪ್ರತಿಶಿಕ್ಷೆಯಾವುದೆನಲು
ಕಲ್ಲು ಹೊಡೆದು ಸಾಯಿಸುವದೆಂಬ ಉತ್ತರವು ಕೇಳಿ ಬರಲು

"ನಿಮ್ಮ ಧರ್ಮಶಾಸನಕೆ ನಾನು ಪ್ರತಿಮಾತನಾಡುತ್ತಿಲ್ಲ
ಹೆಣ್ಣಿನಂತೆ ಗಂಡಸಿಗು ಶಿಕ್ಷೆ ಕಟ್ಟಳೆಯದೇಕೆ ಇಲ್ಲ –
ಎಂಬ ಯೋಚನೆಯ ಮಾಡುತಿದ್ದೆ ಸರಿ; ನಿಮ್ಮ ಶಾಸ್ತ್ರಕೋತು
ನೀವು ನಡೆಯುತಿರೆ ನಿಮ್ಮ ಇಷ್ಟವದು, ಆದರೊಂದು ಮಾತು

"ಇಲ್ಲಿ ನೆರೆದ ಜನರಲ್ಲಿ ಯಾರು ಈ ಮೊದಲು ಒಂದುಕೂಡ
ಪಾಪಗೈಯದಿಹರವರು ಮೊದಲು ಕಲು ಹೊಡೆಯಬೇಕು ನೋಡ
ದುಷ್ಟ ಕೃತಿಯ ಮುಚ್ಚಿಟ್ಟುಕೊಂಡು ಉತ್ತಮಿಕೆಯನ್ನು ನಟಿಸಿ
ಕೊಂದ ಪಾಪ ಅವರನ್ನೆ ತಿಂದು ತೇಗುವದು ಪೀಡೆಗೊಳಿಸಿ" –

ಎಂದು ನುಡಿಯೆ ನೆರೆದಿದ್ದ ಜನತೆ ತಳಮಳಿಸಿ ತಮ್ಮತಮಗೆ
ಅವರು ಇವರ ಮುಖ ನೋಡಿ ಆತ್ಮವಂಚಕರು ತೆಪ್ಪಗಾಗೆ
ಒಬ್ಬರೊಬ್ಬರೂ ಕಲ್ಲನೆತ್ತಿ ಹೊಡೆಯಲಿಕೆ ಧೈರ್ಯವಿರದೆ
ಬಂದ ದಾರಿಯನು ಹಿಡಿದು ಸಾಗಿದರು ನಿಲ್ಲಲಿಷ್ಟ ಪಡದೆ

ಮೇರಿ ಯೇಸುವಿನ ಚರಣ ತೊಳೆಯುತಿರೆ ಕಣ್ಣಧಾರೆಯಿಂದ
ಪಾದಪದ್ಮಗಳ ತಬ್ಬಿ ಹಿಡಿದು ತನ್ನೆರಡು ಕೈಗಳಿಂದ :
"ಪಾಪವೆಂಬ ತಿಳುವಳಿಕೆ ಆಗ ನನಗಾಗಲಿಲ್ಲ ತಂದೆ
ಇದಕೆ ಅವರು ಅಪರಾಧವೆನಲು ನಾನರಿಯದೇನೆ ಗೈದೆ.

ನನ್ನ ಊರಿನೆಡೆ ಇನ್ನು ಹೋಗೆ ನನಗಾರು ಇಲ್ಲವಲ್ಲಿ
ನಿನ್ನ ಮಗಳು ನಾ ನಿನ್ನ ತಂಗಿ ತಾಯಿಯೊಲು ಇರುವೆನಿಲ್ಲಿ
ಅನುಗ್ರಹಿಸು ಓ ಗುರುವೆ ನಿನ್ನ ಆಜನ್ಮ ಸೇವೆಯೊಂದು"
ಎಂದು ದುಃಖ ತಾಪದಲಿ ಕರುಣಕಥೆ ತೋಡಿಕೊಂಡಳಂದು.

ಪವಿತ್ರಾತ್ಮ ಪರಮಾತ್ಮವರದ ಕರಚಾಚಿ ಕರುಣೆ ಹೊನಲು
ಹರಿದು ಘಾಯಗಳ ಸವರಿ ಮೆಲ್ಪಿನಲಿ ಯೇಸು ಸಂತವಿಡಲು
ಮೈಯನೋವಿನುರಿ ಮಾಯವಾಗಿ ತಂಪಾಗಿ ಸೌಖ್ಯವೊದಗಿ
ಆತ್ಮಶಾಂತಿಯಮೃತದಲಿ ತೇಲೆ ಆನಂದಲೋಲೆಯಾಗಿ

ತಂಪು ಗಾಳಿ ನಿಷ್ಕಂಪಮಾದ ಸಾಗರದಿ ತೀಡುತಿರಲು
ಕ್ರಿಸ್ತನಮರಸಂದೇಶ ಪೊತ್ತು ಸಮತೆಯಲಿ ಹಂಚುತಿರಲು
ಅಮೃತ ಕಿರಣನುದಯಿಸಿದ ಇಳೆಯ ಬೆಳುದಿಂಗಳಲ್ಲಿ ತೊಳೆದು
ತೇನೆ ಹಕ್ಕಿ ಮಂಗಲವ ಪಾಡಿ ಹಾರಿತ್ತು ನಭವನಳೆದು.

ಮಾತಂಗ ಬೆಟ್ಟದಿಂದ

೧

ದುಂಡಾದ ಬಂಡೆಗಳ ಮೇಲುರುಳಿ ನುಣ್ಣನೆಯ
ಹಾಸುಗಲ್ಲಲಿ ಜಾರಿ ಅಲ್ಲಲ್ಲಿ ಮಡುಗಟ್ಟಿ
ಚಕ್ರ ತೀರ್ಥವ ರಚಿಸಿ ಬೆಟ್ಟದಡಿಗಳ ಮುಟ್ಟಿ
ಪಂಪಾನಗರಿಗಿಂಬುಗೊಟ್ಟ ತುಂಗಭದ್ರೆಯ
ಜಲತರಂಗದಿ ಮಿಂದು ಶ್ರೀ ವಿರೂಪಾಕ್ಷಂಗೆ
ಕೈಮುಗಿದು ಭುವನೇಶ್ವರಿಗೆ ನಮಿಸಿ ಸಂಪೂಜಿತ
ವಿಜಯ ವಿದ್ಯಾರಣ್ಯರಂ ನೆನೆದು ಅತಿ ವಿಕೃತ-
ಗೊಂಡು ಹಾಳು ಸುರಿಯುವ ಹಂಪೆಕೊಂಪೆಯಲಿ ಬಗೆ-
ಗೆಟ್ಟಲೆದು ಸ್ವಪ್ನಸಾಮ್ರಾಜ್ಯದಿಂದೀ ನಗರ -
ಕವತರಿಸಿ ಮಂಕಾಗಿ ಭವ್ಯ ರಮಣೀಯತೆಯ
ರುದ್ರ ಶಾಂತಿಯೊಳಿಳಿದು ಒಂದಿನಿತು ನೆಮ್ಮದಿಯ
ಬಯಸಿ ಮಾತಂಗ ಬೆಟ್ಟವನೇರಿ ಕನ್ನಡರ
ಕರ್ಮಕತೆಯನು ನೆನೆದು ಕುಳಿತೆ ನಾಂ ಮೌನದಲಿ
ಕವಿಗೆ ಕವಿ ಮಣಿವಂತೆ ಮೂಕ ಶಿಲೆಸಂಗದಲಿ.

೨

ದಟ್ಟೈಸಿ ನಿಂದಿರುವ ಬಂಡೆಗಲ್ಲಿನ ದಂಡು
	ಸಹಜ ನಿರ್ಮಿತ ಕೋಟೆ ಕೊತ್ತಳೆನೆ ನಸುಬಾಗಿ
	ತಮಗೆ ತಾವೇ ಅಡಕಲೇರಿ ಮಂಟಪವಾಗಿ
ಮೂಡಿಹವು. ಪರಿಕಾಲ್ಗಳಿಂ ತಿಳಿಯ ನೀರುಂಡು
ನಳನಳಿಸಿ ಬೆಳೆದು ಹೊಂದಲೆದೂಗಿ ಕಂಗೊಳಿಸಿ
	ನಲಿವ ಭತ್ತದ ಗದ್ದೆ, ಕಬ್ಬು ಬಾಳೆಯ ತೋಟ
	ಕೊಬ್ಬಿ ಗರಿ ಹೊಡೆಯುತಿವೆ;ಏನಿದೆಂತಹ ನೋಟ-
ವೆಂದು ಮನ ಜೋಂಪಿಸಿರೆ ಹಿಂಗತೆಯು ಮರುಕಳಿಸಿ
ದುಸ್ವಪ್ನದಲಿ ತೋರಿ ಮೀರಿ ಅಸ್ತವ್ಯಸ್ತ -
	ವಾಗಿಹುದು ಅಂದಿನಂದಿನ ಇಂದ್ರನಾಸ್ಥಾನ!
ಕನ್ನಡ ರಮಾರಮಣರಾಳಿ ಬಾಳಿದ ತಾಣ!
'ಏಳು ಸಾಯಣ ಕಟ್ಟು' ಎಂಬ ಯತಿ ಧ್ಯಾನಸ್ಥ -
ನಾಗಿ ಕುಳಿತಿಹನಿಂದು ಹುಕ್ಕಬುಕ್ಕರ ನೆನೆದು
ಇಂದಿನವರಭಿಮಾನಶೂನ್ಯ ಮೌನಕೆ ಮುನಿದು.

೩

ಗೋಪುರಕೆ ಗೋಪುರವನೆತ್ತಿ ಕಲೆ ಬಿತ್ತರಿಪ
ಮುರುಕು ಮಂಟಪ, ಪಾಳು ಪೌಳಿ, ವಿಗ್ರಹವಿರದ
ವಿಠ್ಠಲನ ಗುಡಿ, ಭಗ್ನ ನರಸಿಂಹ, ನೆಲಸಮದ
ಆಸ್ಥಾನ ಮಂಟಪಂ, ಸೊಂಡಿಲೊಡೆದಿಹ ಗಣಪ.
ಒಂದೆರಡೆ? ಶಿಥಿಲ ಸೌಂದರ್ಯದಲಿ ಮುಕ್ಕಾದ
ನೂರಾರು ಮೂಕಶಿಲೆ! ಕಾಲತಾಂಡವ ಪದಕೆ
ಹತಿಗೊಂಡು ಬೇನೆ ಬಿದ್ದಿಹ ಕಲೆಯ ನರಳುವಿಕೆ!
ತುಂಗಭದ್ರೆಯು ಸಾಕ್ಷಿ ನುಡಿದಂತೆ ಎಚ್ಚರದ
ಗಂಟೆ ಬಾರಿಸಿದಂತೆ ಮೊರೆಯಿಡುತ ಹರಿದಿಹಳು.
ಉದಯಾಸ್ತಮಾನದಲಿ ಮತ್ತೊಮ್ಮೆ ಜೀವಕಳೆ
ಬಂದಂತೆ ಮಿನುಗಿ ಹಂಪೆಯ ಪೆಂಪು ಕಣ್ಣ ತೊಳೆ -
ವುದು ವಿಭವ ರಾಗದಲಿ; ಮರುಗಳಿಗೆಯಲಿ ಹಾಳು!
ತೊಟ್ಟುಳಿದು ಕಳಚುತಿರೆ ಮುಗಿಲ ಬೆಳಕಿನ ಹಣ್ಣು
ಕುಂಕುಮವನಳಿಸಿರುವ ವಿಧವೆಯೊಲು ಇಳೆವೆಣ್ಣು.

ಗೋಳಗುಮ್ಮಟ

ಬ್ರಹ್ಮಾಂಡಮಂ ನಿರ್ಮಿಸಿದ ಕರ್ತಾರನದಟು
ಬಿಡಿಸಲಾಗದ ಒಗಟು ; ಆ ಗೂಢತಮ ತಮೋ
ವಿಸ್ತೀರ್ಣದಲಿ ಬೆಳಕಿನರಿಲುಗಳ ಸೋದಿಸಿಹ
ಧುರಧರನು ವಿಜ್ಞಾನಿ; ಪೂರ್ಣತೆಯನರಿಯನ್ಯೆ.
ಸೃಷ್ಟಿಕರ್ತಾರನಾಡುಂಬೊಲದ ಕಮ್ಮಟಕೆ
ಧೀಂಕಿಡುವ ಮನುಜಕೃತಿ ಗೋಳಗುಮ್ಮಟವ್ಯೆಸೆ?
ಮುಗಿಲನಿಲ್ಲಿಯೆ ನೆಲಕೆ ಎಳೆದು ತಂದಿಹ ಶಿಲ್ಪಿ
ಭವ್ಯತೆಗೆ ಗುಮ್ಮಟ ಕಿರೀಟವನೆ ತೊಡಿಸಿಹನು.

ಅಡಿಯಿಂದ ಮುಡಿಯನಿಟ್ಟಿಸೆ ಎದೆಯ ಮೇಲುರುಳಿ
ಬೀಳ್ವ ತೆರ! ಹಮ್ಮು ಬಿಮ್ಮಿನ ಸೊಮ್ಮು ಹಮ್ಮದಂ-
ಬೋಗುತಿದೆ! ಇದರ ಗರ್ಭದಲಿ ಪರಬೊಮ್ಮ ಗುರು
ಗುಮ್ಮ; ಬಯ್, ಹೊಗಳು, ನಗು, ಅಳು, ಹಾಡು, ಚೀರಾಡು
ಯಾವೆಲ್ಲವೇಳು ಸಲ ಪಡಿನುಡಿದು ಗುಪ್ತವೆನಿ-
ಸುವದಿರವು : ಇದು ಜಗದ ಬಗೆ, ದೃಷ್ಟಿಯೊಲು ಸೃಷ್ಟಿ!

ಗೆಳೆತನ

ಗೆಳೆತನದ ಸುವಿಶಾಲ ಆಲದಡಿ ಪಸರಿಸಿಹ
ತಣ್ಣೆಳಲ ತಂಪಿನಲಿ ತಂಗಿರುವೆನು;
ಜೀವನದನಂತ ದುರ್ಭರ ಬವಣೆ ನೋವುಗಳ
ಕಾವುಗಳ ಮೌನದಲಿ ನುಂಗಿರುವೆನು.
ಗೆಳೆತನವೆ ಇಹಲೋಕಕಿರುವ ಅಮೃತ
ಅದನುಳಿದರೇನಿಹುದು - ಜೀವನ್ಮೃತ!

ನಲ್ಲನಲ್ಲೆಯರೊಲವು ಬಂದುಬಳಗದ ಬಲವು
ತನ್ನಿಚ್ಛೆ ಪೂರೈಸುವವರ ಛಲವು
ಎಳ್ಳಿನೇಳನಿತಾದರೂ ಸ್ವಾರ್ಥ ಹೊಂದಿಹವು
ಎತ್ತಿ ಕಟ್ಟುವರದಕೆ ಮಮತೆ - ತೊಡವು.
ಗೆಳೆತನದ ಒಳತಿರುಳ ಬಲ್ಲ ಧರ್ಮಿ
ಕೇಳು : ನಿಜ ಗೆಳೆಯ ನಿಷ್ಕಾಮಕರ್ಮಿ!

ಇಲ್ಲಿ ವಂಚನೆಯಿಲ್ಲ ಚಂಚಲತೆಯಿನಿತಿಲ್ಲ
ಮೇಲು ಕೀಳುಗಳೆಂಬ ಭೇದವಿಲ್ಲ
ಅಹಮಿಕೆಯ ನೆವಮಿಲ್ಲ ದ್ವೇಷ ಗುಣಮಣಮಿಲ್ಲ
ಸಣ್ಣತನ ಸಂಕೋಚ ಮೊದಲಿಗಿಲ್ಲ
ಮನವು ಬಾನಗಲ, ಎದೆ ತಿಳಿಗೊಳದೊಲು
ಭಾವ ಶುದ್ಧ ಸ್ಪಟಿಕ - ಬೆಳದಿಂಗಳು!

ಉಪ್ಪಿಗಿಂತಲು ರುಚಿಯು ತಾಯಿಗಿಂತಲು ಬಂಧು
ಇಲ್ಲೆಂಬ ಗಾದೆ ನುಡಿ ಕೇಳಿರುವೆನು,

ಗೆಳೆತನದ ಶುಚಿ ರುಚಿಯು ಇದಕು ಮಿಗಿಲಾಗಿಹುದು
ಎಂಬ ಸಾಹಸ ಮಾಡೆ ದೋಷವೇನು?
ಕಂಡಕಂಡವರೇನು ಬಲ್ಲರಿದನು
ಉಂಡವನು ಕಂಡಿಹನು ಇದರ ಹದನು.

ಹೇಗೊ ಹೇಗೋ ಹೆಗಲುಗೊಟ್ಟು ಬಂದಿಹ ಕೂರ್ಪು
ಆಗು ಹೋಗುಗಳಿಂಗೆ ಬಾಗದಂತೆ
ಸುಖಕೆ ಸಂತಸಪಟ್ಟು ದುಃಖದಲಿ ಸಹಭಾಗಿ-
ಯಾಗೆ ಜೀವನ ರಸದ ಪಾಕದಂತೆ-
ಸರಸವಿರಸವನೆಲ್ಲ ಅಪ್ಪುಕಯ್ದು
ಬಾಳುವರು ಗಂಧದೊಲು ಜೀವ ತೇಯ್ದು

ಬಾಳ ಪಾರಾವಾರದಲ್ಲಿ ಸಾರಾಸಾರ
ಸುವಿಚಾರ ದೋಣಿಯಲಿ ಯಾನಗೈದು
ತತ್ತ್ವನಿವಹದ ದ್ವೀಪ - ದೀಪಮಾಲೆಗಳಂತೆ
ಕೆಳೆಯರೊಲವಿನ ಬೆಳಕು ಸೂರೆಗೈದು
ಸೂಳ್ನುಡಿಯ ಸೈಪಿನಲಿ ಕರುಣೆಯೆರೆದು
ಹಿತವ ಕೋರುವರಂತರಂಗ ತೆರೆದು.

ಇನಿವಿರಿದು ಗೆಳೆತನದ ಗುಟ್ಟಿಹುದು ನಲ್ ಗೆಳೆಯ
ಬಿನ್ನಣದ ನುಡಿಯಲ್ಲ, ಎದೆಯ ಮೀಟಿ
ಜೀವ ಜೀವಕೆ ಇಂಬುಕಯ್ವವರು ನಾಲ್ವರಿರೆ
ಚತುರಂಗ ಬಲವಿದಕೆ ಯಾವ ಸಾಟಿ?
ಗೆಳೆತನವೆ ಚಿರಬಾಳ ಸಂಜೀವಿನಿ
ವಿಶ್ವದಂತಃಕರಣ ಮಂದಾಕಿನಿ!

ಮೆಲುಪು ತಣ್ಪಿನ ಕಂಪು ಮಲ್ಲಿಗೆಯ ಮೆಲ್ಲೆದೆಗೆ
ಒಲವು ರೇಶಿಮೆಯೆಳೆಯ ಪೋಣಿಸಿಹೆವು;
ಎನ್ನಿನಿಯ ಗೆಳೆಯರೆದೆ ಶೂನ್ಯ ಸಿಂಹಾಸನದಿ
ಬೆರಸಿ ಬೇರಿಲ್ಲದಿಹುದೊಂದೆ ಸೊಗವು,
ಹಿಂದುಮುಂದಿನ ಎಣಿಕೆ ಬೇರೆ ಇರಲಿ
ಇಂದಿಗಿದೆ ಸಿದ್ಧಾಂತ ಜೀವನದಲಿ.

ಮಾತು

ಮುಂಜಾವದಲಿ ಹಸಿರು ಹುಲ್ಲ ಮಕಮಲ್ಲಿನಲಿ
ಪಾರಿಜಾತವು ಹೂವ ಸುರಿಸಿದಂತೆ
ಮುಟ್ಟಿದರೆ ಮಾಸುತಿಹ ಮಂಜುಹನಿ ಮುತ್ತಿನಲಿ
ಸೃಷ್ಟಿ ಸಂಪೂರ್ಣತೆಯ ಬಿಂಬಿಪಂತೆ.

ಮೆಲ್ಲೆದೆಯ ಸವಿಯೊಲುಮೆ ಕರಗಿ ಕಂಬನಿಯಾಗಿ
ಹೆಣ್ಣ ಕಣ್ಣಂಚಿನಲಿ ತುಳುಕುವಂತೆ,
ಸುಳಿಗಾಳಿಯೊಂದಿನಿತು ಸೂಸಿ ಬಂದರು ಸಾಕು
ಮರವನಪ್ಪಿದ ಬಳ್ಳಿ ಬಳುಕುವಂತೆ,-

ನಾವು ಆಡುವ ಮಾತು ಹೀಗಿರಲಿ ಗೆಳೆಯ
ಮೃದುವಚನ ಮೂಲೋಕ ಗೆಲ್ಲುವುದು ತಿಳಿಯ;
ಮೌನ ಮೊಗ್ಗೆಯನೊಡೆದು ಮಾತರಳಿ ಬರಲಿ
ಮೂರು ಗಳಿಗೆಯ ಬಾಳು ಮಗಮಗಿಸುತಿರಲಿ.

ಶ್ರೀಮುಖ

ತಾಯ ಶ್ರೀಮುಖ ಕಂಡು ಮನವು ನೆಮ್ಮದಿಗೊಂಡು
ಎದೆ ಹಿಗ್ಗಿ ಸಂತಸದಿ ಹಾಡುತಿಹುದು,
ಅವಳ ಕರುಣೆಯ ಕೊಂಡು ವಾತ್ಸಲ್ಯ ಸವಿಯುಂಡು
ಮಮತೆಯಲಿ ಅದನಿದನು ಬೇಡುತಿಹುದು.

ಇಲ್ಲಿ ಎದೆಗುದಿಯಿಲ್ಲ ಕವಡುಗಂಟಕವಿಲ್ಲ
ಭಾವ ಪಾವನ, ಲಾಲಿ ಹಾಲಿನೊಡಲು;
ಅಕ್ಕರದಿ ಮೈದಡವಿ ತಕ್ಕೈಸಿ ಮುದಗೊಂಡು
ಹದುಳದಲಿ ಹರಸುತಿಹ ತಾಯ ಮಡಿಲು.

ತಪ್ಪಿರಲಿ ಒಪ್ಪಿರಲಿ ಸೆರಗಿನಲಿ ಮುಚ್ಚಿ,
ದುಗುಡವಿರೆ ನಗೆಯ ಬೆಳದಿಂಗಳವ ಹೊಚ್ಚಿ,
ಕಂಟಕವ ದೂರಿಟ್ಟು ಸಂತವಿಸಿ ಕಾಯೆ,
ಎಂಟೆದೆಯ ಬಂಟನಾಗುವ ತೆರದಿ ತಾಯೆ!

ಉರುಳುರುಳು ಕಂಬನಿಯೆ!

ನನ್ನೆಲ್ಲ ಹಂಬಲವನೊಂದು ಬಿಂದುವಿನಲ್ಲಿ
ಬಿಂಬಿಸಿಹ ಕಂಬನಿಯೆ! ಹೇಳಕೇಳದೆ ಹೊರಟು
ನಿಂತಿರುವ ಅತಿಥಿಯೊಲು ಕಣ್ಣ ಹೊಸತಿಲ ದಾಟು-
ತಿರಲು ನಾನಿನ್ನೇವೆ? ಉರುಳುರುಳು ಎದೆಯಲ್ಲಿ
ಕುದಿವ ಕಡಲೊಂದಿರಲು ಶೋಕವಾಹಿನಿ ಹರಿದು
ಮನದ ಮಲಿನತೆ ಕಳೆದು ಅಮೃತವಾಹಿನಿಯಾಗಿ
ಚಿಮ್ಮಿ ಬರುವನ್ನೆವರ ; ಮಳೆ ಬಿದ್ದು ಹೊರಪಾಗಿ
ತೊಳೆವ ಬಾನಿನ ಮೊಗದಿ ಹಗಲುಗಣ್ಣೆವೆದೆರೆದು
ನೋಡುತಿರೆ ಸೃಷ್ಟಿ ಮಹಿಮಾಪೂರ್ಣಮಾದಂತೆ
ಋತಚಿತ್ತಿನಲಿ ವ್ಯೋಮ ಭೂಮ ಪುರುಷಾಕಾರ
ನೆಲೆಗೊಂಡು, ಕ್ಷಾಂತಿ ಶಾಂತಿಯು ಎದೆಯನಪ್ಪುವರ
ಉರುಳುರುಳು ತೆರಳು ಕಂಬನಿವೊನಲೆ ಓರಂತೆ!
ಸದ್ದಿರದೆ ಸಾಗುವದೆ ಜೀವನದಿ ತೀರ್ಥಯಾತ್ರೆ
ಕಡೆಮುಟ್ಟಿ ಪಡೆವ ಸುಖಕೀ ದುಃಖ ಪಾನಪಾತ್ರೆ.

ಕಂಬನಿಗೆ

ಕಂಬನಿಯೆ, ನೀನೀಸು ದಿನವೆಲ್ಲಿ ಹುದುಗಿದ್ದೆ
ಯಾವ ಹೃದಯದ ತಳವ ಸೋಸುತಿದ್ದೆ?
ನಾನೂ ನೀನೂ ಅವಳಿ - ಜವಳಿಯೆಂಬುದ ಮರೆತು
ಯಾರ ನಿಟ್ಟುಸಿರೊಡನೆ ಬೆರೆಯುತಿದ್ದೆ?

ಇಂದು ನಾನಾಗಿಯೇ ಕರೆವೆ ಕನಿಕರಿಸಿ ಬಾ
ಇಳಿಸು ನನ್ನೆದೆ ಭಾರ ದುಃಖಪೂರ!
ಮರಮಳೆಗೆ ಕೆರೆ ತುಂಬಿ ಕೋಡಿ ಬಿದ್ದಾಕ್ಷಣದಿ
ಕೊಚ್ಚಿಕೊಂಡೊಯ್ವತೆರ ಮಲೆತ ನೀರ!

ಕಂಬನಿಯೆ, ಅನುಭವದ ಖಣಿಯ ಮಣಿಯೆ!
ಬಾಳುದ್ದಕೂ ನಾನು ನಿನಗೆ ಋಣಿಯೆ?
ಕಂಡವರಿಗೆಲ್ಲ ನೀ ಸಿಕ್ಕಬಹುದೆ?
ನೀನಿರದ ಸುಖ ಜಗಕೆ ದಕ್ಕಬಹುದೆ?

ಕಂಬನಿಯೆ ಸಾಕು!

ಎಂದು ಇಲ್ಲದ ವಿರಸವಿಂದು ಕೂರಸಿಯಾಗಿ
ಮಾತು ಮಾತಿನ ಮೊನೆಯ ಮಸೆಯಿತೆಂತು?
ನಿನ್ನೆದೆಯ ಸಂತಾಪವಿಂತು ಹರಿಯಿತೆ ಪಾಪ!
ಮೌನದೇವತೆ ಶಾಪವಿತ್ತಳೆಂತು?

ಜಗದ ವ್ಯವಹಾರಿಕತೆಗೇಕೆ ವ್ಯಥೆ ಕಿಂಕರತೆ?-
ಪ್ರೀತಿ ಅಂತಃಕರಣ ನಿನ್ನದಿದೆಕೊ!
ಅದುನುಳಿದರೇನುಂಟು? ಬರಿಯ ಗಾಳಿಯ ಗಂಟು!
ತೆರೆದ ಹೃದಯದೊಳದನೆ ಬರಮಾಡಿಕೊ!

ಬಿಡಿಸಿದಷ್ಟೂ ಬಾಳು ಬರಿ ಗುಂಜು ತೊಡಕು
ಕಂಡಕಂಡೆಡೆಯಲ್ಲಿ ಕರುಣೆಯನೆ ಹುಡುಕು;
ಅವರಿವರ ಅಲ್ಪತನಕಿನ್ನೇನು ಬೇಕು?
ನಿನ್ನ ನೋವಿಗೆ ನಿನ್ನ ಕಂಬನಿಯೆ ಸಾಕು!

ಬಾಳಕೊರಡು

೧

ಇದು ಬಾಳ ಕೊರಡ ಮುಡಿ -
ಮೇಲೆ ಕಾಣದ ಕೈಯ ಕರಗಸವು
ರೌರವದಿ ಕೊರೆಯುತಿದೆ
ಕೊರಡಿನೆದೆ ಬಿರಿಯುತಿದೆ
ಕಂದರದಿ ಧಡಧಡಿಸಿ ನುಗ್ಗುತಿಹ ರೈಲಿನೊಲು
ಮೇಲೆ ಕೆಳಗೋಡುತಿದೆ ಕರಗಸದ ಹಲ್ಲು!
        ಅದರ ಬಿರುಕಿನ ಕ್ಷೀಣ ಸ್ವರವೊಂದು ಬೇಸರದಿ
        ಮೊರೆಯುತಿದೆ ಬಯಲಿನಲ್ಲಿ
        ಕಾಲನೊಡ್ಡಿಹ ತುಮುಲ ಜಾಲದಲ್ಲಿ!
ಚಣಚಣಕೆ ಕಟ್ಟಿಗೆಯ ಅಟ್ಟಹಾಸವು ಅಡಗಿ
ಅವನ ಕೈಮೆಗೆ ಓರೆಕೋರೆ ಹುಡಿ ಹೊಟ್ಟಾಗಿ
ಒಟ್ಟೈಸಿ ಉದುರುತಿದೆ ರಾಶಿಯಾಗಿ
ಬಾಳೆಲ್ಲ ಗಾಸಿಯಾಗಿ.

೨

ತೀಡುತಿದೆ ಉಜ್ಜುಗೊರಡು
ಮೂಡುತಿದೆ ಹೊಸತು ಕೊರಡು;
ಪೊಳ್ಳು ಪೊದರಿನ ಪದರು
ಬೆದರಿ ಚದುರುತ್ತಿಹವು
ಉರುಳುರುಳಿ ಸುರುಳಿಯಾಗಿ
ತನ್ನ ಬಲಹೀನತೆಗೆ ತಾನೆ ಬಾಗಿ.

ಮತ್ತೆ ಕೆತ್ತಿಹವಲ್ಲಿ ಹೂವು ಬಳ್ಳಿ
ಕೊರಡು ಕೊನರಿಸಿತೆಂಬ ಭ್ರಾಂತಿಯಲ್ಲಿ.

ಯಾವ ಮಂದಿರದ ಆಧಾರಸ್ತಂಭಕೊ ಕಾಣೆ
ಇಂತು ಜೀವಸ್ತಂಭ ಸಿದ್ಧವಾಗಿ
ನಿಂತಿಹುದು ಕರ್ತವ್ಯಬದ್ಧವಾಗಿ!
ಹೊತ್ತ ತಲೆಭಾರದಲಿ
ಕತ್ತು ತತ್ತರಿಸದೊಲು
ಯಾವ ಶಕ್ತಿಯು ನೆರವು ನೀಡಲಿಹುದೊ!
ಇಲ್ಲ, ಬೇರೆಯ ತೆರವು ಬೇಡಲಿಹುದೊ!

ಬರುವುದೆಲ್ಲ ಬರಲಿ ಬಿಡು

ಬರುವುದೆಲ್ಲ ಬರಲಿ ಬಿಡು -
ಏಕೆ ಅದರ ಚಿಂತೆ?
ದುಃಖ ಸುಖವು ನಗೆಯು ಹೊಗೆಯು
ಎಲ್ಲ ಅಂತೆ ಅಂತೆ.

ನಾವು ಗೈದ ಒಳಿತು ಕೆಡಕು
ಜೀವ ಪಡೆವ ಭೋಗ;
ನಮ್ಮ ನುಡಿಯ ನಡೆಯ ಒಡಲ
ಕಡೆದ ಬೆಣ್ಣೆ ಯೋಗ!

ಕಣ್ಣು ಕಟ್ಟಿ ಬೆನ್ನು ತಟ್ಟಿ
ಓಡಿಸುವನು ಕಾಲ,
ಇವರ ಬಿಟ್ಟು ಇವರು ಯಾರು?-
ಎಂಥ ಮೋಹ ಜಾಲ!

ಮಿಡುಕನುಳಿದು ಹುಡುಕಬೇಕು
ಅದುವೆ ಬಾಳ ಮೂಲ,
ಪಡೆಯದಿರಲು ಕಣ್ಣ ನೀರ
ಕರೆವುದಲ್ಲ ಶೀಲ.

ಬಟ್ಟಬಯಲ ತುತ್ತತುದಿಗೆ
ತಿರುಗುತಿಹವು ಗೋಲ;
ಕೊಟ್ಟು ತೀರಲಿಲ್ಲ ಜನುಮ
ದೇವನಿತ್ತ ಸಾಲ.

ಏಸೊ ಕಡಲ ಈಸಿ ಬಂದು
ಬೀಸುತಿಹುದು ಗಾಳಿ;
ಗಾಸಿಗೊಂಡ ಭೂಮಿತಾಯಿ
ನರಳುತಿಹಳೆ ಹೇಳಿ.

ಮುಗಿಲಜೇನನರಸುತಿರುವ
ತುಂಬಿ ಭಾವದುಂಬಿ,-
ಹುಟ್ಟುಹರಿಯೆ ಮುಂದುಗೆಟ್ಟ
ಓಟ ಎತ್ತೊ ಎಂಬಿ.

ಶಿಖರಕೊಂದು ಹೆಜ್ಜೆಯಿಟ್ಟು
ಗಾಳಿದೇರನೇರಿ,
ಬಾಳಕನಸು ಕರೆಯುತಿಹುದು
ಯಕ್ಷ ಲೋಕ ಸೇರಿ.

ಏನು ಮಾಟ! ಏನು ಮೋಡಿ!
ಚಣದ ನೋಟ ಬೇಟ;
ಹೀಗೆ ಸಾಗುತಿಹುದು ನಮ್ಮ
ನೆಳಲು ಬೆಳಕಿನಾಟ!

ವಿಶ್ವಕವಿಯ ದೃಶ್ಯಕಾವ್ಯ

ಬಯಲಿನಲ್ಲಿ ನಿರ್ವಯಲನಾಗಿ ದಿಗ್ವಲಯ ಮೀರಿ ನಿಂದೆ
ಗಗನ ಮಕುಟ ಭೂಲೋಕ ದೇಹ ಪಾತಾಳ ಪಾದದಿಂದೆ.
ಸೂರ್ಯಚಂದ್ರ ಕಣ್ಣಾಲಿಯಾಗಿ ಆ ಮೂಡು ಪಡುವಲಿಂದೆ
ವಿಶ್ವದಾಟವನು ನೋಡುತಿರುವೆ ನೀ ನಿರ್ನಿಮೇಷದಿಂದೆ.

ಉದಯ ಪುಣ್ಯವೆನೆ ಹಗಲು ಜ್ಞಾನ ಮುಚ್ಚಂಜೆ ಮುಕ್ತಿಯಂತೆ
ಕೋಟಿ ತಾರೆಗಳು ಮುತ್ತು ಸತ್ತಿಗೆಯ ಬೆಳಕನೆತ್ತಿದಂತೆ.
ಗಾಳಿಯುಸಿರಿನಲಿ ಮೆಲ್ಲನೂದುತಿಹೆ ಪ್ರಾಣ ವಾಯುವನ್ನೆ
ಬೂದಿ ಹಾರಿ ತನಿಗೆಂಡ ತೋರಿ ತೊಳಗಿರುವುದಾತ್ಮವನ್ನೆ!

ಮೇಘದೋಲೆಯಲಿ ಮಿಂಚುಬಳ್ಳಿ ರುಜುಮಾಡಿ ಬರೆಯುತಿರುವೆ
ಅರ್ಥವಾಗದಿದೆ, ಆದರೂನು ಕನಿಕರದಿ ಮಳೆಯ ಸುರಿವೆ!
ಉಷಾಸಂಧ್ಯೆಯರ ಸುಂದರಾಂಗದಲಿ ನಿಂದ ನಿಲವದೇನು?
ಕನಸು ಕೋದ ಕೋದಂಡದಂತೆ ಮಳೆಬಿಲ್ಲ ಚೆಲುವದೇನು?

ಗಿರಿಯ ಬಾಹುಗಳ ಚಾಚಿ ತಬ್ಬಿರುವೆ ಸಸ್ಯಶಾಮಲೆಯನು
ಹಣ್ಣು ಹೂವುಗಳೆ ಭಾರವಾಗಿ ಬಳುಕಿರುವ ಕೋಮಲೆಯನು.
ಗುಡುಗು ಸಿಡಿಲು ಭೋರ್ಗರೆವ ಕಡಲು ಮತ್ತೇಕೆ ಇಂಥ ಕೋಪ?
ಆಗ ಈಗ ಭೂಕಂಪ ಬೇರೆ ಮನುಕುಲಕೆ ಕೊಟ್ಟ ಶಾಪ!

ಮಹಾಕಾವ್ಯವೀ ಭವ್ಯಸೃಷ್ಟಿ ಇದನೋದಿದನಿತು ರಮ್ಯ
ಮಹಾಕವಿಯ ವಿದ್ವದ್ವಿಭೂತಿ ಅನುಭಾವಿ ಹೃದಯ ಗಮ್ಯ
ಅರುಹಲಿದನು ಅವತಾರವೆತ್ತಿ ತಂತಾನೆ ಭಾಷ್ಯ ಬರೆದ
ಪೂರ್ಣ ಯೋಗಿ ವಿಜ್ಞಾನಿಯಾಗಿ ಇದರಂತರಂಗ ತೆರೆದ.

ಪ್ರಕೃತಿಯ ಮಡಿಲಲ್ಲಿ

"Earth has not anything to show more fair/"

- Wordsworth

(ಕರ್ನಾಟಕ ಕಾಲೇಜಿನ ಅಟ್ಟದಿಂದ ಕಾಣುವ ನಾಲ್ಕೂ ಹೊತ್ತಿನ ನೋಟ)

ಮೂಡಣದ ಬಾನಿನಲಿ
ಮುಗಿಲು ನೆಲ ಮಿಲನದಲಿ
ಕ್ಷಿತಿಜ ಕಂಕಣದಲ್ಲಿ
ಉಷೆಯ ನಸುನಗೆಯಂತೆ
ಬಣ್ಣಬಣ್ಣದ ಸಂತೆ
ಬಾಂದಳವ ಸಿಂಗರಿಸಿ
ಬಗೆಯಲ್ಲಿ ಬಿತ್ತರಿಸಿ
ಚೆಲುವು ಮೈದೋರುತಿರೆ
ಎದೆ ಹಿಗ್ಗಿ ತೆರೆಯುತಿರೆ
ದುಂಡಾಗಿ ಚೆಂಡಾಗಿ
ಕುಂಕುಮಾಂಕಿತನಾಗಿ
ಸುಕುಮಾರ ಸುಂದರನು
ಮೂಡಿದನದೊ!

ಗಿಡಮರದ ಸಂದಿಯಲಿ
ಹಸುರಿಡಿದ ತೋಪಿನಲಿ
ಹೊಂಗಿರಣ ನುಗ್ಗಿ ಬರೆ
ಸುಳಿಗಾಳಿ ತೇಲಿಸಿರೆ,
ಹುಲ್ಲಿನೆಸಳುಗಳಲ್ಲಿ

ಮಂಜುಹನಿ ಮುತ್ತಿನಲಿ
ಕೆತ್ತನೆಯ ನಿರ್ಮಿಸಿರೆ,
"ಕುಹೂ ಕುಹೂ ಹಾ ಹೂ
ಚಿಂವ್ ಚುಕ್ ಚುಕ್ ಟಿವ್ವೂ"
ನೂರಾರು ಹಕ್ಕಿಗಳ
ಸ್ವಚ್ಛಂದ ರಾಗಗಳ
ತಾಳ ಹಿಮ್ಮೇಳದಲಿ,
ಬಂಚರದ ಇಂಚರದ
ಗಾನ ಮಧುಪಾನದಲಿ
ವಿದ್ಯಾಲಯದ ಬಯಲು
ತುಂಬಿ ತುಳುಕಾಡಿರಲು
ಕಿವಿದೆರೆದು ಮೌನದಲಿ
ಆಲಿಸಿಲ್ಲಿ!

ಬಳ್ಳಿಗಳ ಗೊಂಚಲಲಿ
ದಾಂಗುಡಿಯ ಜೋಕಾಲಿ,
ಹುಲುಗಲದ ಟೊಂಗೆಯಲಿ
ಕೊನರಿರುವ ಹೊಂಗೆಯಲಿ
ಚೆಂದಳಿರ ಮಾವಿನಲಿ
ಚಿಗುರೊಡೆದ ಹುಣಿಸೆಯಲಿ
ರಾಜಿಸಿರೆ ಹೂಜಲ್ಲಿ
ಸೂಸಿರುವ ನೆಲದಲ್ಲಿ
ತುಂಬಿಗಳ ಝೇಂಕಾರ-
ಬನದೆದೆಯ ಓಂಕಾರ!
ಹಾರುತಿದೆ ಮಮಕಾರ

ಸೌಂದರ್ಯ ಸಾಕಾರ-
ಗೊಂಡು ಕಂಗೊಳಿಸಿಹುದು
ಕಂಡು ಕಂಗಳ ಬರವು
ಹಿಂಗುತಿಹುದು!

ಇದರಾಚೆ ನೋಡಲ್ಲಿ!
ಹೆಬ್ಬಾವಿನಂದದಲಿ
ಹಬ್ಬಿರುವ ನಗರದಲಿ
ಪೊಗೆದಳೆದ ಮಬ್ಬಿನಲಿ
ನಿದ್ದೆಯಲಿ ಮುಸುಕಿನಲಿ
ಇಂತಿರುವ ನಸುಕಿನಲಿ
ನೀರವದ ಬೀದಿಯಲಿ
ನಿಚ್ಚಳದ ಹಾದಿಯಲಿ,
ಒಂದೆರಡು ಮೂರಾಗಿ
ಹತ್ತಾಗಿ ಹಲವಾಗಿ
ಜನವೆದ್ದು ನಡೆದಿಹುದು,
ವಾಹನವು ಓಡಿಹುದು;
ಎದ್ದಿರುವ ಧೂಳಿಯಲಿ
ಗದ್ದಲದ ಹೋಳಿಯಲಿ
ಶಾಂತಿ ಕಾಲ್ದೆಗೆಯುತಿದೆ
ನೆಮ್ಮದಿಯು ಕದಡುತಿದೆ
ನಿತ್ಯ ವ್ಯವಹಾರದಲ್ಲಿ
ನಗರದಲ್ಲಿ.

ಹೊತ್ತು ನಡುನೆತ್ತಿಯಲಿ
ಕೆಂಡವನು ಕಾರುತಿರೆ
ನಿಟ್ಟುಸಿರು ಜಾರುತಿರೆ
ಮೈಬೆವರು ಹನಿಯುತಿರೆ,
ನೀಲಗಣಿ ಬಾನಿನಲಿ
ಗಾಜು ಕೊಪ್ಪರಿಗೆಯಲಿ
ತುಂಡು ಮೋಡದ ದಂಡು
ಉಂಡಾಡಿಗರ ಹಿಂಡು
ಅತ್ತಿತ್ತ ಸರಿದಾಡೆ
ತಿಳ್ಳಿಯಾಟವನಾಡೆ,-
ಮೇಣೆಲ್ಲಿ ತಿರೆಯಲ್ಲಿ
ಬಿತ್ತರದ ಬಯಲಿನಲಿ
ಬಿಸಿಲುಗುದುರೆಯನೇರಿ
ಕಣ್ಬಿಟ್ಟಿ ಹೌಹಾರಿ
ಹಗಲು ದಿಗಿಲಾಗಿಹುದು!
ಗಾಳಿ ಮಾತಾಡಿಸದೆ
ಎಲೆಯನಲುಗಾಡಿಸದೆ
ಮರದ ತಣ್ಣೆಳಲಲ್ಲಿ
ನಿರ್ವಿಣ್ಣ ಮೌನದಲಿ
ವಿಶ್ರಾಂತಿ ಪಡೆಯುತಿದೆ
ಸದ್ದಿಲ್ಲದೆ!

ದೂರ ಕಾನನದಲ್ಲಿ
ಏಳೆ ಸುಂಟರಗಾಳಿ
ಮುಗಿಲುದ್ದ ಕೆಂಧೂಳಿ-
ಯಲ್ಲಿ ತರಗೆಲೆ ತೇಲಿ

ಎಳೆ ಹರಿದ ಪಟದಂತೆ
ವಿಚ್ಛಿನ್ನ ಮನದಂತೆ
ಮರವಟ್ಟು ಸುತ್ತುತಿದೆ
ಗಿರಗಿರನೆ ತಿರುಗುತಿದೆ
ಭೂವ್ಯೋಮ ಮಧ್ಯದಲಿ
ಶೂನ್ಯದಲ್ಲಿ!

ಗಾಡಿ ಸಿಳ್ಳನು ಹೊಡೆದು
ಮೌನ ಮುದ್ರೆಯನೊಡೆದು,
ಗಿರಿಯ ಕಿಬ್ಬದಿಯಿಂದ
ಕಂದರದ ಮರೆಯಿಂದ
ಧೀಂಕಿಟ್ಟುಹೊರಬಂದು
ವಿಧವಿಧದ ಪಯಣಿಗರ
ಹೊತ್ತು ಮನ ಬೇಸತ್ತು
ಚೀರಿ ಬುಸುಗುಟ್ಟುತ್ತ
ಕರ್ಬೊಗೆಯ ಕಾರುತ್ತ
ಧಾವಿಸಿದೆ ರಭಸದಲಿ
ಕಾರ್ಯ ಮುಗಿತಾಯಕ್ಕೆ
ನಿಲ್ದಾಣಕೆ!

ಪಡುವಣದ ಮಡಿಲಲ್ಲಿ
ರವಿ ನಿದ್ದೆಗೈವಂದು,
ಹೊಂಗಿರಣಗಳ ಚಾಚಿ
ಬಾಂದೇವಿ ತಲೆಬಾಚಿ
ಬಣ್ಣದೆಣ್ಣೆಯ ಪೂಸಿ
ತೊಟ್ಟಿಲಲಿ ಪಟ್ಟಿರಿಸಿ

ಬಾನಲ್ಲಿ ಬುವಿಯಲ್ಲಿ
ಬನದಲ್ಲಿ ಬಯಲಲ್ಲಿ
ಗುಡಿ ಚರ್ಚು ಗೋಪುರದಿ
ಕಾಲೇಜಿನಂಗಳದಿ
ಹೊಂಬೆಳಕು ಹರಡುತಿರೆ
ಕವಿಗಾಳಿ ತೀಡುತಿರೆ
ಕಲಕಂಠ ನುಲಿಯುತಿರೆ
ಗಿಳಿವಿಂಡು ಹಾರುತಿರೆ
ಬೆಳ್ಳಕ್ಕಿ ಬಳಿವಿಡಿದು
ಬಿಳಿಚುಕ್ಕಿ ಗರಿಯೊಡೆದು
ಬಾಂದಳವನಲೆವಂತೆ
ಉಡ್ಡಾಣಗೈಯುತಿರೆ,
ದನಕರದ ಕೊರಳಿಂದ
ಗಂಟೆಗಳ ಟಿಂಟಿಣಿಯು
ಕೊಳಲಿಂಧ ಇನಿದನಿಯು
ಮಂದ ಮಂದಾನಿಲನ
ಬೆನ್ನೇರಿ ಬಳಿಸಾರೆ,
ಲಾಲಿ ಕಿವಿ ತಟ್ಟುತಿರೆ
ಚಿನ್ಮಯಾನಂದದಲಿ
'ನಾನು' ಬಯಲಾಗುತಿರೆ
'ನೀನು' ಮೈದುಂಬುತಿರೆ
ರೋಮ ರೋಮಂಗಳಲಿ
ನಾದದುನ್ಮಾದದಲಿ
ಚೈತನ್ಯ ಹರಿಯುತಿರೆ,
ಮಾನಸ ಸರೋವರವು

ತೊಳೆದ ಕನ್ನಡಿಯಾಗೆ
ಹೃದ್ರಂಗದಲಿ ಭಾವ
ಚಿಲುಮೆ ಪುಟಿದೇಳುತಿರೆ
ಜೇನ್ಗೊಣದ ಹುಟ್ಟಿನಲಿ
ಗಜಬಜೆಯು ಹುಟ್ಟುತಿರೆ,
ಜೇಂಬನಿಯು ಜಗಳುತಿರೆ
ಮುಚ್ಚಂಜೆ ಮುಸುಗಿನಲಿ
ಹೊಂಬಣ್ಣ ಮಾಸುತಿರೆ
ಇಳೆಯು ಸೆರೆಯಾಗುತಿರೆ
ಮೆಲ್ಲಮೆಲ್ಲನೆ ಇರುಳು
ಇಳಿಯುತಿಹುದು.

ಕತ್ತಲೆಯ ಮೊತ್ತದಲಿ
ಬಡಿದು ಮಲಗಿಸಿದಂತೆ
ಪಟ್ಟಣವು ನಿದ್ರಿಸಿರೆ
ನಿಶ್ಶಬ್ದ ಮುದ್ರಿಸಿರೆ
ಗಿಡಗಂಟಿ ಬೇಲಿಯಲಿ
ಕೀಟ ಜಿಂಯ್‌ಗುಟ್ಟುತಿರೆ,
ಚಿಕ್ಕೆಗಳು ಗಗನದಲಿ
ಕಣ್ಣು ಮುಚ್ಚಾಲೆಯಲಿ
ಚಂದಿರನ ಹುಡುಕುತಿರೆ
ಚೆಲ್ವೆಳಕ ಸಿಡಿಸುತಿರೆ
ನಾ ನಿಂತ ಕಟ್ಟಡವು
ತಲೆಯೆತ್ತಿ ನಿಂತಿಹುದು
ಪರ್ವತಪ್ರಾಯದಲಿ
ಧ್ಯಾನದಲ್ಲಿ!

ರುದ್ರ ಭೀಷಣದಲ್ಲಿ
ಗಾಳಿ ತುಸು ಮೊರೆಯುತಿರೆ,
ನೆನೆನೆನಸಿ ಅತ್ತಂತೆ
ಎಲೆ, ರವುದೆ ನಲುಗುತಿರೆ,
ಟಿವಂಕ್ಕಿ ಟಂಕಾರ
ದಿಗ್ದಿಗಂತಕೆ ಹಬ್ಬಿ
ಗಿರಿಸಾನುಗಳ ತಬ್ಬಿ
ಕತ್ತಲಲಿ ಕರಗುತಿದೆ!
ಅರರೆ! ಹೊನ್ನಿಯ ಹುಳವು
ಧರೆಯ ಜಂಗಮ ತಾರೆ
ಮಿಂಚು ಹುಡಿಯಾದಂತೆ
ರೆಕ್ಕೆಯಿಹ ಕಿಡಿಯಂತೆ
ಕತ್ತಲೆಯ ಕಣ್ಣಿನೊಲು
ಮುಚ್ಚುತಿದೆ ತೆರೆಯುತಿದೆ
ಕುಳಿತೆದ್ದು ಹಾರುತಿದೆ
ಅತ್ತಿತ್ತ ಸಾರುತಿದೆ
ಕಂಡು ಮರೆಯಾಗುತಿದೆ
ಬೆಳಕು ಹನಿಯಾದಂತೆ
ತಿರೆಯುತ್ತಮಾಂಗದಲಿ
ಕೆತ್ತಿರುವ ಮಣಿಯಂತೆ
ಕತ್ತಲೆಯ ಕಡಲಿನಲಿ
ಮುತ್ತಿನಂತೆ!

ಒಂದು ಮುಂಜಾವು

ಒಂದು ಮುಂಜಾವಿನಲಿ ತುಂತುರಿನ ಸೋನೆವಳೆ
'ಸೋ' ಎಂದು ಶ್ರುತಿ ಹಿಡಿದು ಸುರಿಯುತಿತ್ತು;
ಅದಕೆ ಹಿಮ್ಮೇಳವೆನೆ ಸೋಕಿ ಬಹ ಸುಳಿಗಾಳಿ
ತೆಂಗು ಗರಿಗಳ ನಡುವೆ ನುಸುಳುತಿತ್ತು.

ಇಳೆವೆಣ್ಣು ಮೈದೊಳೆದು ಮಕರಂದದರಿಶಿಣದಿ
ಹೂ ಮುಡಿದು ಮದುಮಗಳ ಹೋಲುತಿತ್ತು;
ಮೂಡಣದಿ ನೇಸರನ ನಗೆಮೊಗದ ಶ್ರೀಕಾಂತಿ
ಬಿಳಿಯ ಮೋಡದ ಹಿಂದೆ ಹೊಳೆಯುತಿತ್ತು.

ಹುಲ್ಲೆಸಳು, ಹೂ ಪಕಳೆ, ಮುತ್ತು ಹನಿಗಳ ಮಿಂಚು
ಸೊಡರಿನಲಿ ಆರತಿಯ ಬೆಳಗುತಿತ್ತು;
ಕೊರಲುಕ್ಕಿ ಹಾಡುತಿಹ ಚಿಕ್ಕಪಕ್ಕಿಯ ಬಳಗ
'ಶುಭಮಸ್ತು' 'ಶುಭಮಸ್ತು'-ಎನ್ನುತಿತ್ತು.

ತಳಿರ ತೋರಣದಲ್ಲಿ ಬಳ್ಳಿ ಮಾಡಗಳಲ್ಲಿ
ದುಂಬಿಗಳ ಓಂಕಾರ ಹೊಮ್ಮುತಿತ್ತು;
ಹಚ್ಚ ಹಸುರಿನ ಪಚ್ಚೆ ನೆಲಗಟ್ಟಿನಂಗಳದಿ
ಚಿಟ್ಟೆ ರಿಂಗಣಗುಣಿತ ಹಾಕುತಿತ್ತು.

ಉಷೆಯ ನುಣ್ಗದಪಿನಲಿ ಹರ್ಷ ಬಾಷ್ಪಗಳಂತೆ
ಮರದ ಹನಿ ತಟಪಟನೆ ಉದುರುತಿತ್ತು;
ಸೃಷ್ಟಿ ಲೀಲೆಯೊಳಿಂತು ತಲ್ಲೀನವಾದ ಮನ
ಮುಂಬಾಳ ಸವಿಗನಸ ನೆನೆಯುತ್ತಿತ್ತು.

ಮಾನಸ ಪೂಜೆ

ಆಹ! ಪ್ರಾತಃಕಾಲ, ಮತ್ತೆ ಅದೊ ಚಿಮ್ಮುತಿದೆ
ಬಣ್ಣಬಣ್ಣದ ಮಣ್ಣ ಕಣ್ಣಿನಲಿ, ಹಕ್ಕಿಗಳ
ಇಂಚರದಿ, ಇಬ್ಬನಿಯ ಸೊಡರಿನಲಿ, ನಿಬ್ಬೆಗದಿ
ಹರಿವರಿದು ಬರುವ ಗಂಧೋದಕದಿ ಮಿಂದ ತಂ-
ಬೆಲರಿನಲಿ ಹೆರೆಹಿಂಗದಮೃತ ಚೈತನ್ಯ ಝರಿ!
ದಿವ್ಯಾನುಭೂತಿಯಲಿ ರಸದ ಪಾವಿತ್ರ್ಯದಲಿ
ಬಾಳ ತೊಳೆಯುವ ಬದುಕ ಸಿಂಗರಿಪ ಮಂತ್ರಮಿದೆ;
ರಸಾಹ್ಲಾದಿನಿ ಪರಾಪ್ರಕೃತಿ ಸಂಜೀವಿನಿ!

ಹೊತ್ತು ಹೋದರೆ ಮತ್ತೆ ಬಾರದೀ ಸಿರಿಯೊಸಗೆ
ಏಳು ಎಚ್ಚರಗೊಂಡು ನೆನೆ ಮನವೆ, ಇಂಥ ತಣ್ -
ಪೊತ್ತಿನಲಿ ಜಗದೆಲ್ಲ ಉತ್ತಮ ವಿಭೂತಿಗಳ,
ಎದೆಗುಡಿಯ ಗದ್ದುಗೆಯಲಿರಿಸವರ ಶ್ರೀಪಾದ
ಪದ್ಮಗಳ, ಪೂಜೆಗೆಯ್, ನಿನ್ನ ನೀನಿಲ್ಲಗೆಯ್
ಅಲ್ಪತೆಯು ಮಹದಲ್ಲಿ ಕರಗಿ ಒಂದಾಗಲಿ!

ಮುಚ್ಚಂಜೆ

೧

ಒಂದರಗಳಿಗೆಯ
ಬಂಧುರ ಸ್ಪರ್ಶಕೆ
ಮಂದಾನಿಲನೈತಂದಿಹನು
ಹಗಲಿನ ಬಿಸಿಲಿಗೆ
ಮಾಗಿದ ಬನಗಳ
ಫಲಗಳ ಸೊಂಪಿನಲೀಜಿಹನು.

೨

ರವಿಯದೊ ಬಿದ್ದನು!
ಕವಿಯದೊ ಎದ್ದನು
ತಂಗಾಳಿಯ ಜತೆ ಕೇಳಿಯಲಿ
ನೀಲಾಂಗಣದಲಿ
ಮೋಡದ ಪುತ್ಥಳಿ
ತೂಕಡಿಸುತ್ತಿರೆ ನಿದ್ದೆಯಲಿ.

೩

ಕ್ಷಿತಿಜದ ವರ್ತುಲ
ಕನ್ನೆಯ ಕೆನ್ನೆಯ
ಕಿತ್ತಳೆ ಹಣ್ಣಿನ ಬಣ್ಣವಿದು;
ಗುಂಗುರು ಗುಂಗುರು
ಮುಂಗುರುಳಂತೆಯೆ
ಮುಚ್ಚಂಜೆಯ ಮುಂಜೆರಗಿಹುದು.

೪

ಒಂದೊಂದಾಗಿಯೆ
ತಾರೆಗಳಿಣಿಕಿರೆ
ಬಾನಿಗೆ ಹೊಸ ಚಿಗುರೊಡೆದಂತೆ!
ದೇವ ಕಣಗಿಲೆಯು
ಎಲೆಗಳನುದುರಿಸಿ
ಕೊಂಬೆಗೆ ಹಿಡಿ ಹೂ ತಳೆದಂತೆ

೫

ತಳಿರಂಗೈಯಲಿ
ಕುಳಿತಹ ಕೋಗಿಲೆ
ಯಾವುದೊ ಛಂದಕೆ ಕುಕಿಲುತಿದೆ.
ಮತ್ತೊಂದೆಡೆಯಲಿ
'ಟುವ್ವಿ'ಯ ಸವಿಯುಲಿ
ತಿರೆಯಾನಂದವ ಸಾರುತಿದೆ.

೬

ಮುಚ್ಚಂಜೆಯ ತೆರೆ-
ಯಾಚೆಗೆ ಕನಸಿನ
ಲೋಕವು ನಾಕವ ತೆರೆದಿಹುದು;
ತುಂಬಿದ ಚಂದಿರ
ಸ್ವಪ್ನದಿ ಸುಂದರ
ಮಾಯಾ ಮಂದಿರ ರಚಿಸುವದು.

೭

ಹಗಲಿರುಳೆರಡರ
ಬಂಧುರ ಮಿಲನದಿ
ಮಿಸುಕಾಡದ ನಸು ಬೆಳಕಿಹುದು;
ದಿನವಿಡಿ ಬಳಲಿಕೆ
ಸಂಜೆಯ ಅಲಸಿಕೆ
ವಿಲಸತ್ ಪ್ರಭೆಯಲಿ ಕರಗಿಹುದು!

ಒಂದು ಸಂಜೆ

ಸಂಜೆವೆಣ್ಣಿನ ಸಕಲ ಸೌಭಾಗ್ಯ ಹೊಮ್ಮುತಿದೆ!
ಕಿಂಜಲ್ಕ ಕುಸುಮಗಳ ಹುಡಿಯ ಹಾರಿಸಿದಂತೆ
ಕೆಂಕಮಾಗಿದೆ ಬಾನು, ಕಿತ್ತಿಳೆಯ ತೊಳೆಯಂತೆ
ಕ್ಷಿತಿಜದಂಚಿನ ತುಟಿಗೆ ರಾಗ ರಂಗೇರುತಿದೆ!
ಮುಂಗುರುಳು ಚಿನ್ನಾಟವಾಡಿದೊಲು ಮುಚ್ಚಂಜೆ
ಕರಿನೆರಳ ಚಾಚಿಹುದು. ನೀಲ ಸೀಮಂತದಲಿ
ಒಂದೊ ಎರಡೋ ಚಿಕ್ಕೆಯರಳು ಚೆಲ್ವೆಳಕಿನಲಿ
ಚಿಮುಕುತಿವೆ. ಇಲ್ಲಿ ಮೌನ ಧ್ಯಾನವೇ ಪೂಜೆ!
ಚಿತ್ರಗಾರನ ಕುಶಲ ಕುಂಚ ಬಣ್ಣಿಸದಿದನು.
ಪಕ್ಷಿಕೂಜನ ನಿಪುಣ ಗಾಯಕಗು ಅಳವಡದು
ಕಬ್ಬಿಗನ ನುಡಿಯಿಲ್ಲಿ 'ಓಂ ನಮೋ' ಎಂದಿಹುದು!
ಪ್ರಕೃತಿ ಸೌಂದರ್ಯದೌದಾರ್ಯಕೆನ್ನಲ್ಪತನು
ಮುಡಿಪಾಗಿ ಕರಗಿಹುದು ಅರ್ಪಣಾನಂದದಲಿ
ಸಾವು ಬಂದರು ಇಂಥ ಶಾಂತ ಸಮಯದಿ ಬರಲಿ.

ಪಥಿಕ

೧

ಯಾವ ಋತುವಿನೊಳಿಂತು ಕನಸು ಕಂಡಳೊ ಪೃಥಿವಿ
ಆಶೆ ಬೀಜಗಳೆನಿತೊ ಮಡಿಲೊಳಿರಿಸಿ
ಮಳೆಯ ರೂಪದಿ ಮುಗಿಲು ಮುತ್ತಿಡಲು ಮತ್ತೇರಿ
ಹೊತ್ತು ನಿಂತಿಹಳಮಿತ ವೃಕ್ಷರಾಶಿ.

೨

ಮಾವು ಬೇವೂ ತೆಂಗು ಕೌಂಗು ನೇರಿಳೆ ಹಲಸು
ಹುಣಸೆ ಹುಲುಗಲ ತಾಳೆ ಬಾಳೆಯಂತೆ
ಮಾಧವಿ ತಮಾಲ ಮಾಲತಿ ಹೊಂಗೆ ಶ್ರೀಗಂಧ
ಸೀತಾಳಿ ಬಕುಳ ಸಂಪಿಗೆಗಳಂತೆ!

೩

ದೇವಕನ್ನೆಯರಿಳೆಗೆ ಇಳಿತಂದು ಗುಟ್ಟಿನಲಿ
ತೊಟ್ಟಿಲವ ತೂಗಿ ಹೆಸರಿಟ್ಟರೇನೊ!
ಹೆಸರಿಲ್ಲದೆಯು ಹಸಿರ ಚಿಮ್ಮಿಸುವ ಪಸದನಕೆ
ಜುಮ್ಮೆಂದು ಮನಸೋತು ಬಿಟ್ಟರೇನೊ

೪

ಇಲ್ಲಿ ಬಣ್ಣದ ತಳಿರ ತುಟಿಯಲ್ಲಿ ಹೂನಗೆಯು
ಅಲ್ಲಿ ಹಣ್ಣಿನ ಗೊನೆಗೆ ಗಿಣಿಗಳೆರಡು
ಸೀಳುದಾರಿಯ ಬದಿಗೆ ಸಾಲು ಮರಗಳ ನೆರಳು
ಗಾಳಿಯೂದುವ ಕೊಳಲು - ಹಕ್ಕಿ ಹಾಡು.

೫

ಜಗದ ನೂರೆಂಟು ತೆರ ಕಲಹ ಕಂಟಕಗಳಿಗೆ
ತಾವು ಕಾರಣವಲ್ಲವೆಂಬ ಹಾಗೆ
ಹುಲ್ಲು ಮೇಯುವ ಹಸುಗಳಲ್ಲಿ ಮೆಲುಕಾಡಿಸಿವೆ
ಹುಲ್ಲುಗದ್ದೆಯೆ ತಮ್ಮದೆಂಬ ಹಾಗೆ.

೬

ನೆಳಲ ಸೆರಗನು ಹಿಡಿದು ಬಿಸಿಲು ಮುಂದೋಡುತಿದೆ
ದೂರ ದೂರದ ತನ್ನ ಮನೆಯ ನೆನೆದು;
ಬಿಳಿಯ ಮೋಡವದೊಂದು ಬೆಟ್ಟದುದಿಯಲಿ ನಿಂದು
ಎಲ್ಲ ಬಲ್ಲವರಂತೆ ಸುಮ್ಮನಿಹುದು.

೭

ಬಾಳ ಬಿಸಿಲಲಿ ಬಳಲಿ ದಣಿದು ಬಂದಿಹ ಪಥಿಕ
ಮರದ ತಣ್ಣೆಳಲೊಂದೆ ನಿನಗಾಸರು;
ಇಲ್ಲಿ ದಣಿವಾರಿ ಮನ ಶಾಂತಿ ಸಂತಸ ಪಡೆಯೆ
ಮುಂದೆ ನಡೆಯುವ ದಾರಿ ಎನಿತು ಹಗುರು!

೮

ಪ್ರಕೃತಿ ತನ್ನೆದೆಯ ಮಧುವಾಟಿಕೆಯ ತೆರೆದಿರಲು
ಅದನು ತಣಿ ಹೀರದೆಯೆ ಸಾಗಬಹುದೆ?
ಯಾರಿಗೀ ಸುಂದರತೆ! ಯಾರಿಗೀ ಪರವಶತೆ?
ಯಾರ ಸುಖಕೀ ಸೃಷ್ಟಿ ನಿನಗಲ್ಲದೆ?

ಹೂಬೇಲಿ

ಎಂದಿನಂತೆಯೆ ದಿನದ ದಾರಿಯಲಿ ಸಾಗುತಿರೆ
ಅನಿರೀಕ್ಷಿತಂ ಬಳ್ಳಿ ಗೊಂಚಲವು ಕೈಚಾಚಿ
ಬಣ್ಣಬಣ್ಣದ ಹೂಗಳನುರಾಗದಲಿ ನಾಚಿ
ಗಾಳಿ ಸುಳಿಯಲಿ ಬಂದು ಕಿವಿಮಾತನುಸುರುತಿರೆ
ನಿಂತು ಬಿಡುವೆನು ನಾನು. ಈ ಪರಿಯ ಸೊಬಗಿನಲಿ
ಅರಸದಿದ್ದರು ಕಾಲ ತೊಡಕುವೀ ಹೂಬೇಲಿ
ಯಾವ ಜನುಮದ ನೇಹ ನಲುಮೆಯಾವೇಶದಲಿ
ಎದೆಯನೊಪ್ಪಿಸಲಿತ್ತೊ! ಮುಳ್ಳು ಮಂಚದೊಳಲಿ
ನವುರು ಹೂಹಾಸಿಗೆಯಲೊರಗಿ ಪಾತರಗಿತ್ತಿ
ಚಂಚಲತೆ ಚೈತನ್ಯ ವಡೆದಂತೆ ಹಾರುತಿದೆ!
ಜೇಡಹುಳು ತಂತು ತಂತುವನೇರಿ ಇಳಿಯುತಿದೆ -
ಇಂತೆಲ್ಲವನು ನನ್ನ ದೃಷ್ಟಿಪಥದಲಿ ಬಿತ್ತಿ
ಸೊಂಪೇರಿ ಬೆಳೆದು ನಿಂತಿಹುದಿದೋ ಹೂಬೇಲಿ
ಹಾದಿಹೋಕರು ನಸುವೆ ನೋಡಬಹುದೇ ಹೊರಳಿ?

ಬಂತು ಭಾರತ ಹುಣ್ಣಿವೆ!

ಬಂತು ಭಾರತ ಹುಣ್ಣಿವೆ!
ತೆರೆದು ಲೋಕದ ಕಣ್ಣಿವೆ!!
ಕನಸೂ ಮನಸೂ ಹೊಂದಿವೆ
ಜೇನು ಬಟ್ಟಲು ತಂದಿವೆ
ಇಂಥ ಸಮಯದಿ ಬಂಧವೆ?
ಏನು ಗೈದರು ಚಂದವೆ!
ಬಾನಿನುದ್ದಕು ಭೂಮಿಯಗಲಕು
ಎಲ್ಲಿಯೂ ಸ್ವಚ್ಛಂದವೆ!
..... ಬಂತು!

ಗಾಳಿ ತಣ್ಣನೆ ತೀಡಿದೆ
ಮರಕೆ ಕಿವಿ ಮಾತಾಡಿದೆ;
ತುಂಡು ಮೋಡವು ತೇಲಿದೆ
ದುಂಡು ಮಲ್ಲಿಗೆ ಹೋಲಿದೆ;
ಹಿಂಡನಗಲಿದ ಕರುವಿನಂದದಿ
ಬಾನ ಬಟ್ಟೆಯೊಳೋಡಿದೆ
..... ಬಂತು!

ಗೋದಿ ಹೊಲವೂ ಮಾಗಿದೆ
ಕಣದಿ ಹಂತಿಯು ಸಾಗಿದೆ;
ಹತ್ತಿ ತೊಳೆ ತೊಳೆ ತೊಳಗಿದೆ
ರೈತನೆದೆ ಮಾರ್ಪೊಳೆದಿದೆ

ಕುಸುಬೆ ಹೂವಿನ ಕುಸುರಿನೊಂದಿಗೆ
ಜೀವನವೆ ಹಾಡಾಗಿದೆ!

..... ಬಂತು!

ನಿರ್ಭಯತೆ ನಿರಪೇಕ್ಷತೆ
ಶುಭ್ರಗುಣ ಸಂಪನ್ನತೆ
ಬಾಳ ಬೆಳಗಿಪ ನವ್ಯತೆ
ನಿರ್ಮಲತೆ ಸವಿ ನಮ್ರತೆ
ಅಳವಡಿಸುತಿವನೆಲ್ಲ ಕರಗಿಸಿ
ಇಂದಿನೀ ಬೆಳಕಾಯಿತೆ?

..... ಬಂತು!

ಜೀವ ಹಂಸವು ನಲಿದಿದೆ
ಶಾಂತಿ ಸಾಗರಕಿಳಿದಿದೆ;
ನೋವು ಚಿಂತನೆ ತೊಲಗಿದೆ
ಇಂದ್ರಲೋಕವು ಮಲಗಿದೆ;
ಚಂದ್ರ ಸಾಕಿದ ಚಿಗುರೆ ಭೂಮಿಗೆ
ಜಿಗಿವ ಹಂಬಲದಲ್ಲಿದೆ!

..... ಬಂತು!

ಜಗದ ಪಾತ್ರೆಯು ತುಂಬಿದೆ
ಎಲ್ಲರಾಸೆಗೂ ಇಂಬಿದೆ;
ಜೈತ್ರಯಾತ್ರೆಗೆ ಕರೆದಿದೆ
ಸಕಲ ಸಿದ್ಧತೆಯಾಗಿದೆ;
ಆವುದೋ ದಿವ್ಯಾನುಭಾವಕೆ
ತಾ 'ಉಧೋ' ಎಂದೆದ್ದಿದೆ!

..... ಬಂತು!

ಸೃಷ್ಟಿ ನೋಂತು ನಿಂತಿದೆ!

೧

ಗಿಡದ ರೆಂಬೆ ಕೊಂಬೆಗಳಲಿ ಚಿಗುರು ಕಣ್ಣ ತೆರೆದಿದೆ
ಎಲ್ಲಿ ನೋಡಿದಲ್ಲಿ ಚೆಲುವು ಗೆಲ್ಲುಗಂಬ ನಿಲಿಸಿದೆ!
ಹೊಸತು ಆಸೆ ಮೂಡಿದೆ
ಹರುಷ ಲಾಸ್ಯವಾಡಿದೆ
ಓ! ವಸಂತ ನಿನಗನಂತ ಆಲಿಂಗನ ಸಂದಿದೆ
ಸೃಷ್ಟಿ ನೋಂತು ನಿಂದಿದೆ!

೨

ಎಂದೊ ಅಗಲಿ ಹೋದ ನಿನಗೆ ನಮ್ಮ ನೆನಪು ಬಾರದೆ
ಮಾಗಿ ಕೊರೆದ ಗಾಯವಿನ್ನು ಇಹುದು ಮನದಿ ಮಾಯದೆ!
ಜೀವ ಕುಲವು ತಪಿಸಿದೆ
ನೂರು ಬಾರಿ ಶಪಿಸಿದೆ
ಪಾದರಸದ ತೆರದಿ ಜಾರಿ ಕಂಡ ಕಡೆಗೆ ಹರಿದಿದೆ
-ತನ್ನ ತನವ ಮರೆದಿದೆ!

೩

ತಳಿರ ತಳ್ಕೆಯಲ್ಲಿ ಮುದ್ದು ಕೋಗಿಲೆಯದೊ ಕುಳಿತಿದೆ
ಅದರ ಉದರದೊಂದು ಉಸಿರು ಹಾಸಿ ಬೀಸಿ ಬರುತಿದೆ;
ಓಹೋ!
ಎಲ್ಲೊ ಕಂಡ ಹಾಗಿದೆ
ಆಹಾ
ಎಂದೊ ಕೇಳಿದಂತಿದೆ!

ಇಂದು ಜಾಡ್ಯ ಹರಿದು ಇಳೆಗೆ ರೋಮಾಂಚನ ತಂದಿದೆ!
- ಸಮರ ತೂರ್ಯದಂತಿದೆ!

೪

ಏನು ಅಂದಬಿಸವಂದವೊ ನಿನ್ನ ಮಧುರ ಮೈತ್ರಿಯು!
ನೃತ್ಯ ಹಾಡು, ಸೊಗದ ಕೋಡು - ಧನ್ಯಳೀ ಧರಿತ್ರಿಯು!
ಹೇಮಂತನ ತ್ಯಾಗವೂ
ಈ ವಸಂತ ಭೋಗವೂ
ಬದುಕಿಗೆಂದೆ ಬಿಜಯಗೈಯೆ ಪ್ರೀತಿ ಸಮಾಯೋಗವು!
- ಹಾಗು ಹೀಗು ಹೇಗೆಯು!
ಬನದ ಬಯಕೆ ಮಾಗಿದೆ
ಚೈತ್ರೋದಯವಾಗಿದೆ!
ಬಾ ವಸಂತ ನಿನಗನಂತ ಆಲಿಂಗನ ಸಂದಿದೆ!
-ಸೃಷ್ಟಿ ನೋಂತು ನಿಂದಿದೆ!

ಶ್ರಾವಣದ ಲಾವಣ್ಯ

೧

ಬಾನ ಸಾಣೆಗೆ ಹಿಟ್ಟು ಸಣ್ಣಿಸಿ -
ದಂತೆ ಜಿನುಗಿದೆ ಸೋನೆಯು;
ಬಿಳಿಯ ತೆಳು ಜವನಿಕೆಯನೆಳೆದಿಹ
ಇಳೆಯು ಸುಂದರ ಮೇಣೆಯು!
ಹುಲ್ಲು ಹಾಸಿದೆ ಹೂವು ಸೂಸಿದೆ
ಗಾಳಿ ಮೂಸಿದೆ ಕಂಪನು
ಶ್ರಾವಣದ ಲಾವಣ್ಯ ಕುಣಿದಿದೆ
ಮಳೆಯು ಹಣಿಸಿದೆ ತಂಪನು.

೨

ಹಸಿರು ಅಪರಂಪಾರ ಹಬ್ಬಿದೆ
ನೆಲವನೆಲ್ಲೆಡೆ ತಬ್ಬಿದೆ;
ಎತ್ತ ಹೊರಳಿದರತ್ತ ಮೆತ್ತಗೆ
ಚಿತ್ತದಲಿ ಅಚ್ಚೊತ್ತಿದೆ!
ತಿಳಿ ಹಸಿರು ಗಿಳಿ ಹಸಿರು ಗದ್ದೆಗ -
ಳಲ್ಲಿ ಓರಣವಾಗಿದೆ
ಕಡು ಹಸಿರು ಕಾಡಿನಲಿ ತೋರಣ -
ವಾಗಿ ಹೊರೆ ಹೊರೆ ಬಾಗಿದೆ!

೨

ಹೂವು ಹೂವಿಗೆ ಕೈಯ ಕುಲುಕಿಸಿ
ನೊಸಲು ನೊಸಲಿಗೆ ಸೋಕಿಸಿ
ನೂರು ಪಾತರಗಿತ್ತಿ ಕುಣಿದಿವೆ
ಮೈಗೆ ಮೈಯನು ಪುಲಕಿಸಿ!
ಹೂಬಿಸಿಲು ಸುಸಿಲಾಟವಾಡಿದೆ
ಕೆನ್ನೆ ಕೆನ್ನೆಗೆ ತಾಕಿಸಿ,
ಮೋಡ ಬಂದಿವೆ ನೋಡ ಬಂದಿವೆ
ಮುತ್ತು ಹನಿಗಳ ಚಿಮುಕಿಸಿ!

೨

ಗಗನ ಪಕ್ಷಿಯು ಹಗಲಿನಕ್ಷಿಯ
ಮುಚ್ಚಿ ಕೂತಿದೆ ಬೆಚ್ಚಗೆ,
ಬೆಳಕು ಗಾಳಿಯು ಕನಸು ಮನಸೂ
ಎಲ್ಲವೂ ಹಸಿ ಹಚ್ಚಗೆ!
ಏನು ಹೇಳುವಿ ಹೇಳು ಕೆಳದೀ
ಇಂಥ ಹಸುರಿನ ಹುಚ್ಚಿಗೆ-
ನಂದನದ ವನವೆಂದೆಯಾ? - ಬಿಡು
ಗುಂಜಿ ತೂಕವು ಹೆಚ್ಚಿಗೆ!

ನಕ್ಷತ್ರ

ಬಾನಿನೊಂದೆಡೆ ತಮದ ರುಂದ್ರ ಪಾತ್ರೆಯಲಿಳಿದು
ದೀನ ಮೊಗದಲಿ ಕಿರಣ ತಾನ ಸೋಪಾನದಲಿ
ನಿರ್ನಿಮೇಷಾಕ್ಷಿಯೊಳಗೇನನೀಕ್ಷಿಸುತಿರುವೆ ಲಲಿತಾಂಗಿ ನಕ್ಷತ್ರವೆ?
ಉನ್ನತದ ತಾರಕಿತ ಗಗನದೊಳು ಏಕಾಕಿ
ಬಿನ್ನಗಾಗುತ ಮೌನವ್ರತಧಾರಿಯಾಗಿರಲು
ಪನ್ನತಿಕೆ ಬಹುದೆಂದು? ಎದೆ ಭಾರವನು ಇಳುಹಲಾರದೆಯೆ
ಕೊರಗುತಿರುವೆ!

ಭವದ ಬಾಳಿನೊಳಿಲ್ಲಿ ದಿವದ ಕನಸನು ಕಂಡು
ಜೀವನದ ಪಾವನಂಗೊಳಿಪ ಹಂಬಲದೊಳಿರೆ
ಆವ ನೋವಿನ ಕಾವು ಕೆಂಗುಲಿಮೆಯಲಿ ಕುದಿಸಿ ನಿನ್ನ ದಿಗ್ಬಲಿ ಹೊಡೆಯಿತೊ!
ಭಾವುಕರಿಗಾತ್ಮಾಭಿರಾಮ ಧೀಮಂತರಿಗೆ
ನೋವಿನೊಡ ಹುಟ್ಟಿ ಮೃದು ಹೂವಾಗಿ ಪ್ರೇಮದಲಿ
ನವೆದ ಸತ್ಯಾಶ್ರಯರಿಗೀ ಜಗದೊಳುಳಿಗಾಲ ಬೆಳೆಗಾಲವಿಲ್ಲವೇನೊ!

ನೊಂದವರ ಕಣ್ಣೀರ ಬಿಂದುಬಿಂದುವು ಜಿನುಗಿ
ಕುಂದದಮರ ಪ್ರೇಮ ಬಾನಾಳ್ಕೆಯಲಿ ಮಿನುಗಿ -
ಅಂದಗೆಟ್ಟಿಹ ಬಾಳೊಳಾವ ಸಂದೇಶವನು ತಂದಿರುವೆ ಕಿರುತಾರಗೆ?
ಅಂಧಕಾರವು ಕಣ್ಣ ತಿವಿದು ನನ್ನೆದೆಗುದಿಗೆ
ಇಂಧನವನೊಟ್ಟಿ ಹಸಿ ಹೆಣವ ಬೇಯಿಸುತಲಿದೆ!
ಬಂಧಮುಕ್ತಿಯ ಪಡೆದ ಚೊಕ್ಕ ಬೆಳಕಿನ ಚಿಕ್ಕೆ ಮುಂದಾವ
ಗುರಿಯು ನನಗೆ?

ನಿಯಮೋಲ್ಲಂಘನ

೧

'ಸುಯ್' ಎಂದು ನಿಡುಸುಯ್ದು ಹುಯ್ಯಲಿಡುತಿದೆ ಗಾಳಿ
ಜಗದ ಆರ್ದ್ರತೆಯನ್ನೆ ಹೀರಿ ಹೀರಿ !
ಮೂಡಗಾಳಿಗೆ ಬಾನ ಮೊಗ ಒಡೆದು ಬಿಳಿ ಬೂದಿ
ಬಳಿದಂತೆ ತೋರುತಿದೆ ಮೇರೆ ಮೀರಿ.

೨

ತರು ಲತಾದಿಗಳಲ್ಲಿ ಚಿಗುರಿಲ್ಲ ಹೊಗರಿಲ್ಲ -
ಅಸ್ಥಿ ಪಂಜರವಾಗಿ ನವೆಯುತಿಹವು;
ಎಲ್ಲೊ ಅಂಗೈಯಗಲ ಹಸಿರು ಕಂಡರೆ ಸಾಕು
ಮನದ ಆಸೆಗಳಲ್ಲಿ ಸೇರುತಿಹವು.

೩

ಏನು ಬಾನೋ ಎನಿತು ದೂರವಿದ್ದಂತಿಹುದು
ನಮಗು ಅದಕೂ ಮಾತು-ಕತೆಯೆ ಇಲ್ಲ
ಒಂದು ಮೋಡವೆ? ಮಿಂಚೆ? ಮಳೆಯೆ? ಕಾಮನ ಬಿಲ್ಲೆ?
ಚಳಿಗಾಲಕೋ ಕೊಂಚ ಬುದ್ಧಿಯಿಲ್ಲ.

೪

ಕ್ಷಾಮ ಡಾಮರ ಬಡಿದ ನಿರ್ವಾಸಿತರ ತೆರದಿ
ಒಣಗಿದೆಲೆಗಳ ರಾಶಿ ಭಣಗುಟ್ಟಿವೆ
ಮೈಕೊರೆವ ಚಳಿಗಾಳಿ ನಿಷ್ಕರುಣದಲಿ ದಾಳಿ -
ಗೈಯೆ ತರಗೆಲೆ ಮತ್ತೆ ಮೊರೆಯುತ್ತಿವೆ!

೫

ಹೇಮಂತ ಋತುವಿಂಗೆ ಸಾಮಂತ ರಾಜರೊಲು
ಸೂರ್ಯ ಚಂದ್ರರು ನಡುಗಿ ಉಡುಗುತಿಹರೊ!
ಧೀಮಂತ ವರ್ಷಋತು ಗುಡುಗು ಹಾಕುವವರೆಗೆ
ಬರಿಯ ನಾಮಾಂಕಿತರೆ ಮೆರೆಯಲಿಹರು!

೬

ಮೂರು ತಿಂಗಳ ಹಿಂದೆ ಮಳೆರಾಯ ಹಗಲಿರುಳು
ಧಾರಿಣಿಗೆ ತನಿಮುದ್ದುಗರೆಯುತಿದ್ದ;
ಹರುಷದಾವೇಶದಲಿ ಹೊನಲು ಧುಮ್ಮಿಕ್ಕಿರಲು
ಪ್ರೇಮಗೀತಗಳೆನಿತೊ ಹಾಡುತಿದ್ದ!

೭

ಮಳೆಗಾಲವೈತರಲು ನನ್ನ ಕವಿತೆಯ ನವಿಲು
ನೂರು ಕಣ್ಣನು ತೆರೆದು ನರ್ತಿಸುವದು!
ಭಾವ ಚಾತಕ ಹೊಚ್ಚ ಹೊಸ ಮಳೆಯ ತಂಬನಿಯ
ಚೇಂಬನಿಯ ಗುಟುಕರಿಸಿ ವರ್ತಿಸುವದು!

೮

ಎಂದು ಬರುವದೊ ಕಾಲ ನನ್ನಿನಿಯ ಮಳೆಗಾಲ
ವಿರಹ ವೈಶಾಖವನು ದಾಟಬೇಕೆ?
ಏನು ಋತುರಿಂಗಣವೊ ವಿಧಿನಿಯಮದಾಳಿಕೆಯೊ
ಒಮ್ಮೆಯಾದರು ತಪ್ಪಿ ನಡೆಯದೇಕೆ?

ಚಿರಂತನ ದಾಹ

೧

ದಿನದಿನವು ಮೂಡಣದ ಬಾನ ಕರೆಯಂಚಿನಲಿ
ಚೆಂಬೆಳಕು ಉಬ್ಬರಂಬರಿಯುತಿಹುದು;
ನೂರು ಕಾರಂಜಿಗಳು ತೆಕ್ಕನೆಯೆ ಪುಟಿದಂತೆ
ಲೋಕಲೋಕಂಗಳನು ತೊಳೆಯುತಿಹುದು.

೨

ಬೊಗಸೆಗಂಗಳ ತೆರೆದು ಮೊಗೆಮೊಗೆದು ಕುಡಿದರೂ
ಈ ಪುರಾತನದಾಹ ತೀರದಲ್ಲಾ!
ಏನೊ ಅಸಮಧಾನ ಹೃದಯಾಂತರಾಳದಲಿ
ಬಾಯ್ದೆರೆದು ಹೀರುತಿರೆ ತೃಪ್ತಿಯಿಲ್ಲ.

೩

ಬಣ್ಣ ಬಣ್ಣದ ಬೆಳಕ ಕಡಲಿನೊಡಲೊಳಗಲ್ಲಿ
ಕಲ್ಲು ಸಕ್ಕರೆಯಂತೆ ಕರಗಿ ಬಿಡಲೆ?
ಇಲ್ಲದಿರೆ ಎಲ್ಲವನು ಒಂದೆ ಬೊಗಸೆಯೊಳಾಂತು
ಆ ಅಗಸ್ತ್ಯನ ತೆರದಿ ಕುಡಿದು ಬಿಡಲೆ?

೪

ಹೊಗೆನಟ್ಟು ಹೋಗಿರುವ ಮನದ ಮನೆ ಗೋಡೆಗಳು
ಸುಣ್ಣ ಬಣ್ಣವನೆಂದು ಕಾಣಬಹುದು?-
ಇಲ್ಲಣವು ಜೋತಿರುವ ಜೇಡಬಲೆ ನೂತಿರುವ
ಬೆಳಕಿಂಡಿಯಲಿ ಬೆಳಕದೆಂತು ಬಹುದು?

೫

ಪಂಚ ಭೂತಗಳೆಲ್ಲ ಮಾನವನ ದೇಹದಲಿ
ಹೊಂಚು ಹಾಕುತ ದಾರಿ ಕಾಯುತಿಹವು;
ಕಿಂಚಿತಾದರು ಕರುಣೆ ಕೊನೆರೊಡೆದು ಬಾರದಿರೆ
ಈ ಪ್ರಪಂಚವೆ ಚಿತೆಯನೇರಲಿಹುದು!

೬

ಕಿಟಕಿಗಳನರೆತೆರೆದು ಕಟಕಿಯಾಡುವ ಗಾಳಿ
ಮಾಡು ನಿನ್ನಯ ದಾಳಿ ಇಂದು ಇಂದೇ!
ಜಗದೆಲ್ಲ ಪುಷ್ಪಗಳ ಪೈರುಗಳ ಪರಿಮಳದ
ಪನ್ನೀರುಗಳನೆರೆದು ಮೀಯಿಸಿಂದೇ!

೭

ಜಗವ ತುಂಬಿದ ಬೆಳಕು ನಮಗೇಕೊ ಸಾಲದಿದೆ
ಎನಿತು ಮಾನವನೆದೆಯ ಆಳ ಅಗಲ!
ಬಂದಷ್ಟು ಇಂಗುತಿದೆ ಮತ್ತೆ ಬರಿದಾಗುತಿದೆ
ಎಷ್ಟು ಸೆಲೆಯೊಡೆದರೂ ವಿಫಲ ವಿಫಲ!

ಬುದ್ಧೋದಯ

ಜಗದ ದುಃಖದ ಕಡಲ ಕಡೆಯಲೊಗೆತಂದ ಶಶಿ
ಕಳೆಯಂತೆ, ಬೆಳುದಿಂಗಳಿನ ಶಾಂತಿ ಮಡುಗಟ್ಟಿ
ಹರಿದಂತೆ, ಮೌನ ಗಂಭೀರತೆಯೆ ಕೆನೆಗಟ್ಟಿ
ನಿಂದಂತೆ ಬುದ್ಧಸ್ಮಿತಂ ! ಕರುಣೆ ನಳನಳಿಸಿ
ದಳದಳವನರೆತೆರೆದಂತೆ ಕಣ್ಮಲರ ಕಾಂತಿ!
ಹಿಂಸಾರತಿಯ ಕೆಸರ ತೊಳೆವ ಬಿತ್ತರದ ಹಣೆ
ನಿಜದ ನೇರಕೆ ಕರೆವ ನಸೆಬಾಗು ಮೂಗುತೆನೆ
ತುಟಿಗಳೆರಡೂ ಪರವ ಸೆರೆಗೈದಿರುವ ದಾಂತಿ!
ನಿದ್ದೆಯಿಂದೆದ್ದ ಮೊಗದುದ್ಬುದ್ಧ ಕಳೆಯಂತೆ
ಮುಗ್ಧ ಮಾನವ ಕೋಟಿ ಅದೆ ಮೊದಲು ಕಂಡಿರುವ
ಅಮಲ ತೇಜೋವಲಯ! ಸಿಂಪಿನಿಂದೊಗೆತರುವ
ಹೊಸತು ತತ್ತ್ವದ ಮುತ್ತು ಮನುಜ ಪುತ್ಥಳಿಯಂತೆ
ಕಂಗೊಳಿಸೆ ಬೋಧಿ ವೃಕ್ಷದಡಿ ಬುದ್ಧೋದಯಂ
ಬ್ರಹ್ಮಾಂಡಕೀಯುತಿದೆ ಶಾಂತಿ ನವನೀತಮಂ.

"ಶ್ರೀ ಕವಿರತ್ನಂ"

ಸಾವಿರದ ಸಾಸಿರಂಬರಿಸ ಪೂರ್ವದಲಿ ಭುವ-
ನದ ಭಾಗ್ಯದಿಂ ಪುಟ್ಟಿ, ಮುದುವೊಳಲ ಬಳೆಗಾರ
ಬೀರ ಕಡಗವ ತೊಟ್ಟು ಇಹಪರದ ರಸಸಾರ-
ವೆನೆ ನಿಮಿರ್ಚಿದ ಕಾವ್ಯ ರನ್ನಕೃತಿ! ಪರಿಕಿಸುವ -
ಗೆಂಟೆರ್ದೆಯೆ? ಒಂದರಲಿ ಶಾಂತ ಮತ್ತೊಂದರಲಿ
ವೀರ ರಸವೊತ್ತರಿಸಿ ಪುಟಿಯುತಿರೆ ಚಲಕಿರಿದ
ಆ ಸುಯೋಧನನ ಘನತೆಯ ರುದ್ರನಾಟಕದ
ದೃಶ್ಯ!- ಗದೆ ಗದೆಯ ಸಂಘಟ್ಟಣೆ - ಮಹಾ ಶೈಲಿ!
ಅತ್ತಿಮಬ್ಬೆಯ ದಾನಚಿಂತಾಮಣಿಯ ಪೆಸರ -
ನುಳಿಸಿ, ರಾಯಗೆ ನಮಿಸಿ, ಪಂಪ ಪೊನ್ನರ ಕೃತಿಯು
ತಿರುಳ ಮಹಿಮೋನ್ನತಿಯ ಬಗೆ ಹೀರಿ, ಜಿನ ಸಮಯ
ದೀಪಕಂ ಒಡೆದನೊಡೆದಂ ನುಡಿಯ ಭಂಡಾರ!
ಸುಭಗದಲಿ ಎರ್ದೆಗೊಂಬ ಗಂಡುಕವಿ ಕೃತಾರ್ಥಂ
ನಿಲ್ಗೆ ನಿನ್ನಯ ಪೆಸರ್ ಚಂದ್ರತಾರಂಬರಂ!

ಷೆಲ್ಲಿ ಕವಿಯನ್ನು ಕುರಿತು

ಭೋರ್ಗರೆವ ಕಡಲು ನಿನ್ನೊಡಲ ನುಂಗಿತೆ ಷೆಲ್ಲಿ?
"ನಿನ್ನ ಮುಳುಗಿಸಿದ ನೀರಿನ ಬಲವನೊಂದು ಕೈ
ನೋಡಿ ಬಿಡುವೆನು" ಎಂದ ಬೈರನ್ನ - ಕವಿಯೆ ಸೈ!
ನೂರು ನೋವನ್ನುಂಡ ಕವಿಜೀವ ನಿನಗೆಲ್ಲಿ
ವಿಶ್ರಾಂತಿ? ಶಾಂತಿಯೆಂಬುದೆ ಭ್ರಾಂತಿ! ಚಿರಕಾವ್ಯ-
ನಂದನದ ಮಂದಾರ! ನವದೃಷ್ಟಿ ನೇತಾರ!
ನಿನ್ನಂತೆ ದಿವ್ಯಲೋಕದ ಕನಸ ಸವಿದದರ
ನನಸಿಂಗೆ ನವೆದರತಿ ವಿರಳ; ಬಗೆ ಸಂಭಾವ್ಯ,
ನಿರ್ವಿಕಾರದ ಬುದ್ಧಿ ಹೃದಯಗಳ ವಿದ್ಯುದಾ-
ಲಿಂಗನಕೆ ಪ್ರೇಮವೆಂದೊರೆದೆ ; ನಿನ್ನ ದುಃಖದ
ಪಾಡು ಜೇನ್ ಕರೆವ ಹಾಡು! ಈ ವಿಲಕ್ಷಣದ ಜಗದ
ವಿಗುರ್ಭಣೆಗಂಜುವೆದೆ ಮನೋದೌರ್ಬಲ್ಯದಾ-
ಕಳಿಕೆ ನಿನಗಿರಲಿಲ್ಲ; ನಿನ್ನಾತ್ಮ ಶಕ್ತಿ ಖನಿ!
ನಿನ್ನ ನೆನದೊಡದೇಕೊ ದುಡುಗುಟ್ಟುವವು ಧಮನಿ!

'ಶ್ರೀ'ಯವರನ್ನು ನೆನೆದು

ಕಂನಾಡ ಬಾನಿನಲಿ ಶ್ರೀಕಾರ ಬರೆದಂತೆ
'ಶ್ರೀ' ಬೆಳ್ಳಿ ಚಿಕ್ಕೆ ಲಕಲಕಿಸಿ ಬೆಳ್ಳಿಂಗೆಡೆಯೆ
ನಾಡ ನಾಡಿಗಳಲ್ಲಿ ಚೈತನ್ಯ ಸೆಲೆಯೊಡೆಯೆ
ಬಾವುಟವನೆತ್ತಿ ದಿಗ್ವಿಜಯಮಂ ಪಡೆದಂತೆ
ದಂಡಯಾತ್ರೆಯ ಗೈದ ವಾಗ್ವಿಭವದುನ್ನತಿಯು!
ತುಂಬು - ವಿದ್ಯೆಯ ತುಂಬುಗಾಂಭೀರ್ಯದಲಿ ಮೆರೆದು
ಕನ್ನಡದ ಸಾರ ಸರ್ವಸ್ವ ಕಡಲಂ ಕಡೆದು
ನವನೀತಮಂ ತೆಗೆದ ಹಿರಿಗೌರವದ ಪರಿಯು.
ಥೇಮ್ಸ ನದಿ, ಕಾವೇರಿ ಸಂಗಮಿಸಿ ಹರಿಯುವೊಡೆ
ನಿಮ್ಮ ಗೀತಸ್ರೋತ! ಏನಿದಚ್ಚರಿಯೆಂದು
ಕಂದೆರೆದು ನೋಡುತಿರೆ ಆ ಪ್ರವಾಹದಿ ಮಿಂದು
"ಸಿರಿಗನ್ನಡಂ ಗೆಲ್ಗೆ!" ಎಂದು ಮುನ್ನಡೆದ ಪಡೆ!
"ಬೀಳ್ಕೊಡಿಂ" ಎನಲೇಕೆ? ಕರುಣಾಳು ಬಾ ಬೆಳಕೆ!
ಸದ್ಗುರು ಪರಂಪರೆಯ ಪುಣ್ಯ ಶ್ರೀಕಂಠಿಕೆ!

ಗಾಂಧೀ ಯುಗ!

ನುಡಿಗೆ ನುಡಿಗೆ ಅಡಿಗಡಿಗೆ ಗಾಂಧಿ ಹೆಸರೆದ್ದು ನಿಲ್ಲುತಿಹುದು
ವಿಶ್ವಬಂಧು ವಿಶ್ವಾತ್ಮನೆಂದು ಜನಕೋಟಿ ನಮಿಸುತಿಹುದು;
ಲೋಕದೀಚೆ ಮುಗಿಲಂಚಿನಾಚೆ ಅವನಾತ್ಮ ತುಳುಕುತಿಹುದು
ನೇಸರುದಿಸಿ ಹೂಗಾಳಿಸೂಸಿ ಸಂದೇಶ ಬೀರುತಿಹವು!

ಯೇಸುಕ್ರಿಸ್ತನುತ್ಪ್ರೇಮಹಸ್ತ ಸುಸ್ತೇಜವಾಂತು ಬಂತು,
ಬುದ್ಧನೆದೆಯ ಉದ್ಬುದ್ಧನೀತಿ ಹಿಂಸೆಯನು ತಳ್ಳಿ ನಿಂತು,
ಬಸವ ನಡೆದ ನುಡಿ ದಯವೆ ಧರ್ಮಗುಡಿಗಳಸವಾಗಲಿಂತು
ಗಾಂಧಿರೂಪ ಅಪರೂಪ ದೀಪ ಭಾರತವ ಬೆಳಗಿತಿಂತು!

ಜಾತಿ ಕುಲಕೆ ದುರ್ನೀತಿ ಬಲಕೆ ನೆಲೆಯಿಲ್ಲವೆಂದು ಸಾರಿ,
ದೇವಸುತನು - ನಮ್ಮಾತ್ಮಕವನು ತನ್ನಂತರಂಗ ತೋರಿ,
ದೀನದಲಿತರುದ್ಧರಣ - ಹರಣ ಮುಡಿಪಿಟ್ಟ ದೇಹಕರಗಿ
ಯೋಗಿ ತ್ಯಾಗಿ !- ಮನಬುದ್ಧಿಮಾಗಿ ಪದಯುಗ್ಮಕೆರಗಿ ಬಾಗಿ!

'ಅವನೆ ಇಲ್ಲ ಇನ್ನುಳಿದುದಿಲ್ಲ' ವೀ ಮಾತು ನಮಗೆ ಹೊಲ್ಲ;
ಅಳಿದುದಿಲ್ಲ, ಅವನಿತ್ತ ಸೊಲ್ಲ ಜಗಜೀವಿ ಜೀವಿ ಬಲ್ಲ!
ಕರುಣೆಯೊಡಲು ಹೆಗ್ಗಡಲು ತುಂಬಿದೆದೆಯಲ್ಲು ತೇಲುತಿಹನು,
ಚಿನ್ನವಾಗಿ ಮನ ಘನ್ನವಾಗಿ ಬಾಳೆಂದು ಹರಸುತಿಹನು!

ಯಾವ ಕೈಯು ಗುಂಡಿಕ್ಕಿ ಕೊಂದೆನೆನ್ನುವದು ತೆರೆದು ತೋರು
ಅದಕೆ ಕೈಯ ಮುಗಿದಿತ್ತು ಮೈಯನೆಡೆಗೊಟ್ಟ ಪಾಪಭೀರು!
ಇದ್ದರೇನೊ ಇನ್ನಿರುವರೇನೊ ಇಂತಿಂತು ಬಾಳಿದವರು?
ಆ ಕಣ್ಣಕಾಂತಿ ನಗೆಮೊಗದ ಶಾಂತಿ ನಿಸ್ಸೀಮ ಪುರುಷರಿವರು!

ಕಣ್ಣೀರ ಕಣವನೊಡೆದೊಡೆದು ನೋಡು ಅಲ್ಲಲ್ಲಿ ಅವನ ನಿಲವು,
ನಿಟ್ಟುಸಿರ ತೆರೆಯ ಮರೆಯಲ್ಲಿ ನಿಂತ ಆ ಮೊಗದ ಬಲವೆ ಬಲವು!
ಜಡದ ತಿರೆಯ ಹರ್ಷಾಂತ ಝುರಿಯ ನಾದದಲಿ ಅವನ ಗೆಲವು,
ನಮ್ಮ ಪಾಡು - ಬಿಡುಗಡೆಯ ಹಾಡು ಅವನಾತ್ಮ ತಳೆದ ಛಲವು!

ದಾಸ್ಯನೊಗವ ಕಿತ್ತೊಗೆದ ಯುಗವ ನಿರ್ಮಿಸಿದ ಸಹನೆ ಬಲ್ಲು,
ಹಗೆಯ ತಿದ್ದಿ ಜನಮನವ ಮಿದ್ದಿ ನವಸೃಷ್ಟಿಗೈದ ಬಾಪು!
ಹೊಸತು ಯುಗವು ಜಯ ಗಾಂಧಿ ಯುಗವು! ಇನ್ನಾವುದಿದಕೆ ಸೊಗವು?
ಭರತಮಾತೆ ಹೆಸರಿಡುವಳಿದಕೆ ಯುಗವಿದುವೆ ಗಾಂಧಿ ಯುಗವು!

ಭಾರತಕುಲಾವತಂಸ

೧

ಕಾಲಪುರುಷಗು ಧೈರ್ಯ ಸಾಲದಾಯಿತು ಇಂದು
ನಿನ್ನ ಕೊಂಡೊಯ್ಯುವೊಡೆ ಕೈ ನಡುಗಿತು;
ಉಕ್ಕಿನೆದೆ ಬಂಟನಿಗು ಕಂಟಕವನೊಡ್ಡುವರೆ
ಕವಡುಗಂಟಕ ವಿಧಿಯ ಎದೆಯುಡುಗಿತು!

೨

ಭಾರತವಿಯತ್ತಳದಿ ವೈರಿಬಲದೆದುರಿನಲಿ
ಗುಡುಗು ಹಾಕಿದ ಗಂಡುಗಲಿಯು ನೀನು;
'ವೀರ ವಲ್ಲಭಭಾಯಿ ನಾಡಗುಡಿಯನು ಕಾಯಿ'
ಎಂದು ಮೊರೆದವು ಎಲ್ಲ ಗಿರಿಯ ಸಾನು!

೩

ಇಂದಾರ ಕೇಳುವದು ಎಂದು ವಿಹ್ವಲಗೊಂಡು
ನೈರಾಶ್ಯದಲಿ ನಿಂದು ಭರತಮಾತೆ
ಅಷ್ಟ ದಿಗ್ಗಜಗಳಿಗೆ ಹಂಬಲಿಸಿ ಕೈಚಾಚಿ
ಅರಸುತಿಹಳಾ ತಾಯಿ ಶೋಕಭರಿತೆ.

೪

ಭರತಭೂಮಿಯ ದಂಡೆಗಪ್ಪಳಿಸುತಿಹವಿಂದು
ಶೋಕಸಾಗರದೆದೆಯ ಬಲ್ದೆರೆಗಳು
ಒಂದಾದರಿನ್ನೊಂದು ಬರುವ ವಜ್ರಾಘಾತ-
ಕೀಡಾಗಿ ನರಳುತಿದೆ ಜನರ ಬಾಳು

೫

ಧೀರ ಜವಹರ ಕೂಡ ಮಗುವಾಗಿ ಮರುಗಿಹನು
ನಮ್ಮ ಪಾಡನು ಬೇರೆ ತೋಡಬೇಕೆ?
ನೋಡನೋಡುತ ಬಂಡೆಗಲ್ಲಿಗಪ್ಪಳಿಸುತಿರೆ
ಉರುಳಿ ಹೊರಳಾಡದೆಯೆ ರಾಷ್ಟ್ರನೌಕೆ?

೬

ನ್ಯಾಯನಿಷ್ಠುರ ಧರ್ಮದಸ್ತಿವಾರದಿ ರಾಜ್ಯ
ರಂಗವನು ನಿರ್ಮಿಸಿದ ಚತುರ ನೀನು,
ರಾಜಕೀಯಕು ಸಾಜಮಾದ ತೇಜವ ತಂದ
ವೀರವಿಲಸತ್ಪ್ರಭೆಯ ದಿವ್ಯ ಭಾನು!

೭

ರಾಜ್ಯ ಸಾಮ್ರಾಜ್ಯಗಳ ಗಳಿಸಿ ಉರುಳಿಸಬಹುದು
ನಾಡಕಟ್ಟುವ ಚಮತ್ಕೃತಿಯೆ ಬೇರೆ
ಪರಪೀಡೆಗೆಡೆಗೊಡದೆ ಸ್ವಾರಾಜ್ಯಕಣಿಗೊಂಡ
ಸೇನಾಧಿಪತ್ಯವದು ದೊಡ್ಡ ಹೋರೆ!

೮

ಈವರೆಗು ಬಾಗದೆಯೆ ನಾಡ ಕಾಪಾಡಿದೊಲು-
ಎದೆಗೊಟ್ಟು ನಿಲ್ಲುವೊಲು ನಮ್ಮ ಹೆಮ್ಮೆ
ಸಾಹಸಕೆ ಅನುಗೊಳಿಸು ಬೀಸುದೋರ್ದಂಡವನು
ಮತ್ತೆ ಮಾರ್ಮೊಳಗಲಿದೆ ನಾಡ ಹಿರಿಮೆ.

೯

ಆ ಮಹಾತ್ಮನ ಸತ್ಯ ರತ್ನದೀವಿಗೆ ಹಿಡಿದು
ನಾಡನೆಮ್ಮದಿಗೊಳಿಸಿದಮರ ವ್ಯಕ್ತಿ
ದಿಟ್ಟತನದೀ ಅಟ್ಟಹಾಸದಲಿ ಮೆರೆದ ಛಲ
ಎಂದಿಗೂ ಕಾಪಿಡಲಿ ಭೀಮಶಕ್ತಿ!

೧೦

ವೀರಭಾರತ ಕುಲವತಂಸನವ, ಬಲ್ಲಿದರ
ಬಲ್ಲಹಂ, ನಾಳ್ಗಾಹಿ ಶ್ರೇಯಾಂಕಿತ
ಅವನ ಮೇಲ್ಮೆಯನರಿತು ನಾಡನುನ್ನತಿಗೊಳಿಪ
ಕೈದೀಪವಾಗು ಓ ಅಧಿದೈವತ!

ಶ್ರೀ ಅರವಿಂದ ಮಹರ್ಷಿ

ಓಂ! ತಮೋಹಾರಿ ಜ್ಯೋತಿರ್ಮೂರ್ತಿ ಚಿಚ್ಛಕ್ತಿ!
ಚಿತ್ತಪಶ್ಯಕ್ತಿಯಿಂ ಯೋಗಸಾಧನೆಗೈದ
ಅಧ್ಯಾತ್ಮದುನ್ನತಿಯನಂತರಾಳದಿ ಪಡೆದ
ಪರಮ ಭಗವನ್ಮುಕ್ತ, ಲೋಕತಾರಕ ಶಕ್ತಿ!
ಜೀವನ ಸರೋವರದಿ ದೈವತ್ವದರವಿಂದ-
ವರಳಿಸಿದ ದಿವ್ಯ ಜೀವನದಮರ ದಾರ್ಶನಿಕ
ಸರ್ವಾರ್ಪಣಂ ಬಲಿದ ಸಿದ್ಧಿ ಅತಿಮಾನಸಿಕ
ಪೂರ್ಣ ತೇಜೋವೃದ್ಧಿ; ತವನಿಧಿಯ ಮಕರಂದ
ಕಾವ್ಯ ಕುಸುಮದಿ ಕನತ್ಕನಕ ಕಾಂತಿಯ ಬೀರಿ
ಸ್ಫೋಜ್ವಲಂ ಮೆರೆದತ್ತು; ಭರತ ಭೂಮಿಯಪಾರ
ಸಂಸ್ಕೃತಿಯ ಬಿಂಬಿಸುತ ಜಗದೆಲ್ಲ ಮಾನವರ
ಕಲ್ಯಾಣಕೀ ಬೆಳಕು ತೋರಲಿಹ ಹೆದ್ದಾರಿ.
ಸಾವಡಸಿತೆಂಬುವರೆ?- ಅದು ನಮ್ಮಲ್ಪ ವಿದ್ಯೆ;
ವ್ಯಕ್ತಿತೆಯುಳಿದ ಭೂಮಾತ್ಮಕಿದು ಯೋಗನಿದ್ರೆ.

ಸಾವ ಗೆದ್ದಿಹ ಬದುಕು

ತುಂಬಿ ಹರಿಯುವ ಹೊಳೆಗೆ ತುಂಬಿ ಬಂದಿತು ಗಳಿಗೆ!
ಗಿರಿಯ ಗಂಭೀರತೆಯ ಹೀರಿ ನೆರೆ ನಾಡುಗಳ
ಕಾಡುಗಳನಲೆದು ತತ್ತ್ವಾಮೃತದ ಶಾಖೆಗಳ
ಕೊಂಡು ಸಾಗಿತು ಶಾಂತಿ ಜ್ಞಾನ ಸಿಂಧುವಿನೆಡೆಗೆ.
ಮೆಲುನಗೆಯ ಕಲಕಲ ನಿನಾದದಲಿ ಬಗೆ ತಣಿಸಿ
ನಿರ್ಮಲೋದಕದಾಳಕಿಳಿದು ಎದೆ ಕನ್ನಡಿಸಿ
ಜೀವನ ರಸಾಯನವ ನೀಡಿ ನೆಲಫಲಗೊಳಿಸಿ
ಧನ್ಯವೆನಿಸಿದೆ ನಾಡಿನಕ್ಕರೆಗೆ, - 'ತತ್ತ್ವಮಸಿ'.
ಸರಸ ಸಜ್ಜನಿಕೆಯನು ಹಿರಿಯರಿಮೆ ಗರಿಮೆಯನು
ತುಂಬಿದನುಭವದೊಂದು ತೇಜೋವಿಲಾಸವನು
ಕಂಡು ಕೈಮುಗಿದಿರುವ ಮಲ್ಲಿಗೆಯ ಮೊಗ್ಗೆಯೊಲು
ಮೆಲ್ಲನೆಯೆ ಎದೆಯ ಪೊದೆಯಲ್ಲರಳಿ ನಿಂದುದನು
ನಮ್ರಭಾವದಿ ಮುಡಿಸಿ ನನ್ನೊಳೆ ಮೌನವಾಂತೆ
ಸಾವ ಗೆದ್ದಿಹ ಬದುಕು ನಿಚ್ಚ ಪರಿಮಳವಲ್ತೆ?

ಬಸವನಾಳರಿಗೆ ಬಾಷ್ಪಾಂಜಲಿ

ಸಂಜೆಯಾಯಿತು; ಬಾನಬಾಳಿಗೆ ಮಂಜು ಕವಿಯಿತು ಒಮ್ಮೆಲೆ!
ಕಣ್ಣು ಮುಚ್ಚುತ ತಣ್ಣಗಾದನು ರವಿಯು; ಬಳಸಿತು ಕತ್ತಲೆ,
ಚಿಲ್ಲನೆಯೆ ಚಳಿಗಾಳಿ ಕೊರೆಯಿತು ನಂಜಿನಂತಹ ವಾರ್ತೆಯು:
ಕನ್ನಡದ ಜೇಂಗೊಡವ ಕದ್ದರು ಸುರರು, - ನಾಡಿನ ಬುತ್ತಿಯ.

"ಇಲ್ಲವಾದರೆ ಇನ್ನು"? ಎಂಬೀ ಸುದ್ದಿ ಹದ್ದಿನ ತೆರದಲಿ
ಎರಗಿ ಬಡಿಯಿತು ನಾಡಸಂತಸ ಕಬಳಿಸಿತು ಆತುರದಲಿ
ಕೇಳಬಹುದೇ ನಮ್ಮ ಕಿವಿಗಳು? ತಾಳಬಹುದೇ ನಮ್ಮೆದೆ?
ತುಂಬಿರುವ ಕೊಡ ತುಳುಕಿತೆಂಬರೆ ಸಲ್ಲುವೆಡೆ ತಾ ಸಂದಿದೆ.

ಏನು ಬಂದಿರಿ ಹದುಳವಿದ್ದಿರಿ ನಾಲ್ಕು ದಿನ ಇರಲಾಗದೆ?
ಏನಿದವಸರ ಕಟ್ಟಿಕೊಂಡಿರಿ ಹೊರಟು ನಿಂತಿರಿ ಆಗಲೆ?
ಬಳಗದಾತಿಥ್ಯವನು ಬಯಸದೆ ಹೊಸತಿಲಾಚೆಗೆ ನಿಂತಿರಾ!
ನೆನಸಿದರೆ ಕನಸಿನಲಿ ಬರುವೊಲು ಮತ್ತೆ ಇಲ್ಲಿಗೆ ಬರುವಿರಾ?

ಅತಿಥಿಯಾಗಿಯೆ ಬಂದವರು ಎಲ್ಲರಿಗು ಮನೆಯವರಾದಿರೇ
'ಇವನು ಆರವನಾರು?' ಎನಿಸದೆ 'ಇವನು ಎಮ್ಮವ' ನೆನಿಸಿರೆ;
ಸಾಗರದ ಗಾಂಭೀರ್ಯ ತಂಗೊಳದಮೃತಶಾಂತಿಯು ನಕ್ಕರೆ
ಹಾಲು ಜೇನೂ ಬೆರಸಿದೊಲು ಸೌಜನ್ಯ, ಹಿರಿಮೆಯೊಳಕ್ಕರೆ.

ನಡೆದು ಬಂದರೆ ಬೆಳ್ಳಿ ಬೆಟ್ಟವೆ ನಡೆಯ ಕಲಿತುದೊ ಎನುವೊಲು
ನುಡಿದು ಹೋದರೆ ತುಂಬುಹೊಳೆ ಸಮನೆಲದಿ ಹರಿಯುವ ತೆರದೊಳು;
ನಡೆನುಡಿಯ ಕೊಂಡಾಡಿ ಲಿಂಗವೆ ಮೆಚ್ಚಿ ಅಹುದಹುದೆಂದಿತು
'ಇಲ್ಲಿ ಸಲ್ಲುವರಲ್ಲಿ ಸಲ್ಲುವ' ರೆಂಬ ಸೊಲ್ಲೇ ಸಂದಿತು.

ಕನ್ನಡದ ಹೊಂದೇರನೆಳೆದಿರಿ ಸಂಸ್ಕೃತಿಯ ಚೈತನ್ಯದಿ
ನಾಲ್ಕು ಗಾಲಿಯು ಭದ್ರವಾಗಿವೆ ಸಾಗಿರೆಂದಿರಿ ಮೌನದಿ
'ಮೂಲೆಯಲ್ಲಿಯೆ ಕುಳಿತು ಮುದುಡುವ ಮೂಳನಿಗೆ ಜಗವಿಲ್ಲವು
ಮುಂದೆ ಬನ್ನಿರಿ' ಎಂದು ಕರೆದಿರಿ ನೂರು ಕೈ ತೇರೆಳೆದವು.

ಹೊಂಗಳಸ ಕೆಂಗೊಳಿಸೆ ಹೂವಿನ ಗೊಂಚಗೊಂಚಲು ತೂಗಿರೆ
ದಾರಿ ದಾರಿಗೆ ಮುಗ್ಧ ಕೈಗಳು ಬೆಳಕಿನಾರತಿ ಎತ್ತಿರೆ
ಹಣ್ಣನೊಗೆದರು ಕಾಯಿಯೊಡೆದರು ಕಪ್ಪುರವು ಪರಿಮಳಿಸಿತು
ಇಂತು ಕನ್ನಡ ಚೆನ್ನಪೊಂಗರ ಚೆಲುವರೆದೆ ಹಿರಿಹಿಗ್ಗಿತು!

ತೇರು ಪಾಜೆಯಗಟ್ಟೆ ಮುಟ್ಟುವ ಮೊದಲೆ ಎದೆ ನೋವಾಯಿತೆ?
'ಸೇವೆ ಸಂದಿತು ಓಂ ಶಿವಾರ್ಪಣ'ಮೆಂದು ಮೈ ಕೈ ಮುಗಿಯಿತೆ?
ಶಾಂತಿಯೋಂಕಾರದಲಿ ಹಾಗೆಯೆ ಮುಚ್ಚಿಬಿಟ್ಟಿರ ಕಂಗಳ?
ಆದಿ ಮಂಗಳ ಮಧ್ಯ ಮಂಗಳ ಅಂತ್ಯಮಂಗಳ ಮಂಗಳ!

ತೆರೆಯಲಿಲ್ಲವೆ ಕಣ್ಣು? ತುಟಿಗಳು ಒರೆಯಲಿಲ್ಲವೆ ಏನನೂ?
ಒರಗಿದರು ಮತ್ತೇಳಲಿಲ್ಲವೆ? ಚಾಚಲಿಲ್ಲವೆ ಕೈಯನು?
ಮೂಡಲಿಲ್ಲವೆ ಮುಗುಳುನಗೆ? ಓ! ಮಿಡಿಯಲಿಲ್ಲವೆ ನಾಡಿಯು?
ಆರು ಬಗೆದರು ಇದುವೆ ಕೊನೆಯೆಂದಾರು ತಿಳಿಯದ ಮೋಡಿಯು!

ಎಂಥ ನಿದ್ದೆಯೊ, ಯೋಗಮುದ್ರೆಯ ಧರಿಸಿ ನಿಂತಿರುವಂತಿದೆ!
ಬಾಳು ಪರಿಣತಗೊಂಡ ಆ ತನಿವಣ್ಣಿನರ್ಪಣದಂತಿದೆ;
'ಕರುಣೆ ಬಾರದೆ ಶಿವನೆ'?- ಭಕ್ತರ ಭಜನೆಯಂತಿದು ಸಾಗಿದೆ
ಇಂಥ ಹೂವಿನ ಸಾವ ಮೊದಲೇ ಪಡೆದು ಬಂದಿರುವಂತಿದೆ.

ನಂಬಿ ನಡೆದರು ನಂಬಿ ಕರೆದರು ತುಂಬು ಬಸವನ ಬಿಂಬವ
ಸಮರತಿಯ ಸಮಕಳೆಯ ಸಮಸುಖ ಸ್ವಾನುಭಾವದ ಸೂತ್ರವ
ಮಾಡುವಾತನು ನೀಡುವಾತನು ಬೇಡುವಾತನು ಬೇರೆಯೆ!
ಸಕಲ ನಿಷ್ಕಲ ಕೂಡಿಕೊಂಡಿರೆ ಎಲ್ಲವೂ ಅದರಲ್ಲಿಯೆ.

ಕನ್ನಡದ ಸುರಧೇನು ಕರೆದಿದೆ ತುಂಬು ಬಿಂದಿಗೆ ಹಾಲನು
ಕುಡಿದು ಬಲಗೊಳಿ ಬಂಧುಗಳೆ, ಮಾರ್ನುಡಿಯಬೇಡಿರಿ ನೋವನು
ಕಾದ ಹಾಲಿಗೆ ಹೆಪ್ಪನೆರೆವುದು ತುಪ್ಪವಾಗಲಿಕೆಂದೆಯೆ
ಕೆಟ್ಟಿತೆನ್ನುವ ಭ್ರಾಂತಿಯಳಿಯಲಿ ಭಾವಶುದ್ಧಿಯು ಇಲ್ಲಿಯೆ!

ನಮ್ಮ ಕೊರತೆಯ ನೆನೆದು ದುಃಖಿಸುವಂಥ ಸಣ್ಣದೆ ನಮ್ಮದು
ಕಾಯಕದಿ ಕಾಯವನು ಸವೆಸಿದ ತುಂಬುಜೀವನವವರದು;
'ಮಾಡಿದೆನು' ಎಂಬತಿಶಯದ ಅಳಿಗಾಳಿ ಸೋಕದ ಆತ್ಮನೆ!
'ತನಗೆ ಬೇಕೆಂದೆತ್ತಿಕೊಂಡನು' ಇಂದು ಆ ಪರಮಾತ್ಮನೆ!

ನಿಚ್ಚವೂ ಶಿವರಾತ್ರಿ; ಪೂಜೆಗೆ ಅಚ್ಚಮಲ್ಲಿಗೆ ಒದಗಿತು.
ಹಚ್ಚ ಹಸುರಿನ ಬನದಿ ಕೋಗಿಲೆ 'ಶಿವ ಶಿವಾ' ಎಂದುಲಿಯಿತು.
ಪೂರ್ಣಮಲ್ಲಿಯು ಪೂರ್ಣಮಿಲ್ಲಿಯು ಪುಣ್ಯ ಪೂರ್ಣದೊಳುದಿಸಿತು
ಪೂರ್ಣದಲ್ಲಿಯೆ ಪೂರ್ಣಮಾಗುತ ಪೂರ್ಣತೆಯೊಳೊಂದಾಯಿತು.

ಚರಮಗೀತೆ

ಇರುಳು ಹೊರಳಿತು ಜೀವ ನರಳಿತು ಕತ್ತಲೆಯೆ ಚೀರಿಟ್ಟಿತು
ಏನ ಬಯಸಿದರೇನಿದಾಯಿತು - ಆಗಬಾರದುದಾಯಿತು;
ವಿಷಮ ಬಾಳಿಗೆ ವಿಷಮಜ್ವರವೇ ಹೊಂಚು ಹಾಕಿತು ಹಿಂಡಿತು
ಮಾನವನ ಇಷ್ಟಾರ್ಥ ಶಕ್ತಿಗು ಯುಕ್ತಿಗೂ ಕೈಮೀರಿತು.

ನಡುವರಯದಲ್ಲಿಂತು ಝುಂಝಾವಾತವೇತಕೆ ಬೀಸಿತೊ
ಬಾಳಗಿಡ ಬುಡಮುಟ್ಟವಲುಗಿತು ಬೇರ್ವೆರಸಿ ಅಡಗೆಡೆಯಿತು
ಚಿಗುರು ಹೂ ಮಿಡಿ ಸಿಡಿದು ಚೆಲ್ಲಾಪಿಲ್ಲಿಯಾಯಿತು ಗೊಂಚಲು
ಎಂಥ ಗಂಡೆದೆಯಾದರೂ ತಲೆದಂಡ ವಿಧಿಗೆತ್ತೆತ್ತಲು!

ಜೀವ ಜೀವಕೆ ಬೆಸೆದುಕೊಂಡಿದ್ದವಗೆ ಕರುಣಾಮೂರ್ತಿಗೆ
'ಮೂಜಗಕೆ ಮಾದರಿಯು ನಮ್ಮೀ ಒಲವು' ಎನ್ನುವ ಜೀವಿಗೆ
ಇಂತು ಕೊನೆಯೇ ಶಿವಶಿವಾ! ಇನ್ನೆಂತು ಬದುಕುವ ರೀತಿಯು?
ಇದಕ್ಕಿದ್ದೊಲೆ ಇಲ್ಲವೆನಿಪುದೆ ವಿಧಿಯ ನಿಷ್ಠುರ ನೀತಿಯು!

'ನನ್ನವರು ನನ್ನವರು ಎಲ್ಲರು' ಎಂಬುದೊಂದೇ ಚಿಂತನೆ
ಪರಹಿತದಿ ಪರಮಾತ್ಮನನ್ನೇ ಕಂಡು ಕೊಂಡಾಡಿದನನೆ
ತನ್ನ ಅಳಲಿಕೆ ತನ್ನ ಬಳಲಿಕೆ ಒಂದನಾದರು ನೆನೆಯದೆ
ಒಳಗೆ ಒಳಗೇ ನುಂಗಿ ನಗುತಿರಲಯ್ಯೊ ಮಿಂಚಿದೆ ಮೀರಿದೆ!

ಹೊರಗೆ ಹೋದರೆ ಒಳಗೆ ಬಂದರೆ ನೀನೆ ನೀನೇ ಬಳಿಯಿರೆ
ಯಾವ ಪುಣ್ಯದ ಫಲವೊ ಸ್ನೇಹವು ನಮ್ಮ ಚಿರಬದುಕಾಗಿರೆ
ಎಂಥ ನೋವಿಗು ನರಳಿಕೆಗು ಗೆಳೆತನವೆ ತೈಲವನೆರೆಯಿತು
ಬಾಳಿನುದ್ದಕು ಅಮೃತವಾಹಿನಿ ಎದೆಗೆದೆಯ ಸಂಗಮಿಸಿತು

ನಿನ್ನ ಹೃದಯದ ದೊಡ್ಡಿತೆಗೆ ನಮ್ರತೆಗೆ ಘನ ಔದಾರ್ಯಕೆ
ಕವಡು ಹೊದ್ದದ ಕೃತಕವರಿಯದ ಮುಗ್ಧ ಮನ ಮಾಧುರ್ಯಕೆ
ಏನು ಕೊಟ್ಟರು ತೀರದಯ್ಯೊ ಏನು ಕೊಟ್ಟರು ಬಾರದು!
ಪರಮ ಪ್ರೀತಿಗೆ ಪ್ರೀತಿಯೇ ಪ್ರತಿಫಲವು ಉಳಿದುದು ಸಲ್ಲದು.

ಒಂದೆ, ಎರಡೇ? ಗಣನೆಗರಿಯದು ನೀನು ಮಾಡಿದ ಉಪಕೃತಿ
ಹಾಡಿಕೊಂಡರು ತೋಡಿಕೊಂಡರು ಮರೆಯಲಾಗದ ಸಂಸ್ಕೃತಿ
ಅಳಿಯಲಾರದು ಜೀವಜೀವಾಳದಲಿ ಜಿನುಗುವ ಝೇಂಕೃತಿ
ನೆನಹು ಗಂಧದ ಕರಡಿಗೆಯು ಮತ್ತದುವೆ ಚಿನುಮಯ ಮೂರುತಿ.

'ಈಗ ಇಲ್ಲಿಯೆ ಹೋಗಿ ಬರುವೆನು' ಎಂದು ಹೊರವಂಟಂತೆಯೆ
ದೂರ ದೂರದ ದಾರಿಯನು ನೀ ಹಿಡಿದು ಸಾಗಿದೆ ಅಂತೆಯೆ;
ಮರಳಿ ಬಾರದ ಭಾಗ್ಯವೇ ಇಂತಾಡಿಸಿತು ಏನಡಿಸಿತಲಾ!
ಬಾಳು ಬಿತ್ತರಗೊಂಡ ನೀಲಾಂಬುಧಿಯ ತೆರೆಗೈ ಚೆಂಡಲಾ!

ಆಗ ಇದ್ದವನೀಗ ಇಲ್ಲೆನೆ ಬಾಯಿ ಬರದಂತಾಗಿದೆ
ಬಪ್ಪುದೆಲ್ಲವು ತಪ್ಪದೆಂದರು ಮನಕೆ ಒಪ್ಪದೆ ಹೋಗಿದೆ;
ನೆನೆಯಲೊಡನೆಯೆ ಧುಮುಧುಮಿಸಿ ದುಡುಕುವವು ಧಮನಿಯು ಧಮನಿಯು
ಜೀವರತ್ನವ ಕಳೆದುಕೊಂಡವರಂತೆ ಹುಡುಕುವೆ ಮೌನಿಯು.

ಸಂಜೆ ಮುಂಜಾವಿನಲಿ ಕೂಡಿಯೆ ಬೆಟ್ಟ ಬನಗಳನಲೆದೆವು
ಸೃಷ್ಟಿಹೃದಯದ ರೂಪರಸಗಂಧದಲಿ ನಮ್ಮನೆ ಮರೆದೆವು;
ಒಂದು ಚಿಕ್ಕೆಯೆ ಚಂದಿರನೆ ಕಿರುಮೋಡ ಬಣ್ಣದ ಹಕ್ಕಿಯೆ
ಎಲ್ಲವೆಲ್ಲವು ಶೋಕಗೀತೆಯೊಳೇಕವಾಗಿಹವಲ್ಲಿಯೆ.

ನಾನು ಎಲ್ಲೋ ತೊದಲು ನುಡಿದಿರೆ ಅದನೆ ಕವಿತೆಯ ಮಾಡಿದೆ
ನಿನ್ನ ಮಹದನುಭೂತಿಯಲ್ಲಿಯೆ ನನ್ನ ಕಲ್ಪನೆ ಆಡಿದೆ.
ಎಲೆಯನುದುರಿಸಿ ಕೊಂಬೆಯಲಿ ಹಿಡಿ ಹೂವು ತಳೆದಿಹ ಕಣಗಿಲೆ
ಅಂತೆ ನಿನ್ನಯ ಬದುಕು ; ಸ್ವಾರ್ಥದ ಸೊಗಡು ಹೊದ್ದದ ಚಿತ್ಕಳೆ.

ಸಾಕು ಸೂರ್ಯೋದಯವು ಚಂದ್ರೋದಯವು ನಿನ್ನಯ ನೆನಪಿಗೆ
ನಾಕದಲ್ಲಿಹ ಆತ್ಮಗಳ ಚೆಲ್ವೆಳಕು ಬೀರುವವಿಂದಿಗೆ -
ಅವರಿವರ ನಡೆನುಡಿಗಳಲ್ಲಿಯೆ ನಿನ್ನ ಭಂಗಿಯ ಕಾಣುತ
ನೀನೆ ಮೈವೆತ್ತಂತೆ ಭ್ರಾಂತಿಯೊಳಿರುವೆ ಮಮ್ಮಲ ಮರುಗುತ.

ಕಣ್ಣಿನರೆಬೆಳಕನ್ನು ಮುನ್ನವೆ ಕದ್ದ ಕಾಲಗೆ ಮತ್ಸರ
ಜಗಕೆ ಅರೆಗುರುಡಾಗಿ ಬಾಳುವೆನೆಂಬ ಚಿಂತೆಯ ಬೆಂತರ
ಇರವಿನಾಸೆಯ ಹಿಂಗಿಸಿತೆ ನುಂಗಿಸಿತೆ ಜಗದಾನಂದವ?
ಒಂದು ಕೊಟ್ಟೊಂದನ್ನು ಕಸಿವುದು ಅವನ ನಿತ್ಯದ ಕೈತವ.

ತ್ಯಾಗಮಯ ಜೀವನಕೆ ಇದ್ದುದರಲ್ಲೆ ಒಂದಿನಿತಾದರೂ
ಶಾಂತಿ ದೊರೆವುದೆ? ದೊರೆವುದೆನ್ನಲು ಎಲ್ಲೊ ಅವರಿವರೊಬ್ಬರು
ಅವರ ಬಾಳೇ ಕೃತಿಯು; ಪ್ರತಿಕೃತಿ ಕವಿಯ ಪ್ರತಿಮಾ ಸೃಷ್ಟಿಯು
ತನ್ನ ಪಾಲಿನ ಭಾಗ್ಯವನು ಹಲವರಿಗೆ ಹಂಚುವ ದೃಷ್ಟಿಯು.

ಹೆತ್ತ ಹೊಟ್ಟೆಯು ಕಕ್ಕುಳಂಗುದಿಕುದಿಯೆ ಬಿಸಿಗಂಬನಿಯಲಿ
ಆರು ಸಂತಯಿಸುವರು ಗೆಳೆಯಾ ತಾಯ ಕರುಳೇ ಬೆಂಬಳಿ;
ಅಕ್ಕರೆಯ ಸಕ್ಕರೆಯ ಸವಿಯೂಡಿಸುವ ಅಂತಃಕರಣವು
ಕರಗಿ ಕಂಬನಿಯಾಗಿ ಹರಿದರು ತಾಪಕಿಲ್ಲವೊ ಶಮನವು!

ಚಿಕ್ಕ ಮಕ್ಕಳ ಮಾತಿನಿಂದಾ ದುಃಖ ಮರುಕಳಿಸುತ್ತಿರೆ
ಕರುಳು ಕಿತ್ತೆಸೆದಂತೆ, ಜೀವಕೆ ಅರೆಮರುಳು ಬಡಿದಂತಿರೆ
ಅಂತು ಇಂತೂ ಅಳಲ ಬುತ್ತಿಯೆ ಜೀವನದ ಸೌಭಾಗ್ಯವೆ?
ಬಡಿದುಕೊಂಡರು ಬುದ್ಬುದವೆ ನಮ್ಮಾಯುಸಿನ ಸಾಫಲ್ಯವೆ?

ಜಾನಪದ ಜೀವನವನರಗಿಸಿಕೊಂಡು ಕೊನೆದಿಹ ಸತ್ಕವಿ
ಲೋಕಗೀತಕೆ ಮಾರುವೋಗಿರೆ ಮನಕೆ ಬಂದಿತೆ ಜೇನ್ -ಸವಿ?
ಹಾಡು ಕೂಡಿಸಲೆಂದು ಓಡಿದೆ ಬೇಡಿ ಜನತಾ ಹೃದಯವ
ಯಾವ ತೃಪ್ತಿಯೊ ನಿನಗೆ ಹನಿ ಹನಿ ಹೀರಿಕೊಂಡಿರೆ ಸಾರವ!

ನಾಡ ತಿರುಗಿದನಂದು ಗುಡುಗಾಡಿದನು ಕವಿ ಸರ್ವಜ್ಞನು
ಕರದಿ ಕಪ್ಪರವಿಡಿದು ಕಂಬಳಿ ಹೊದೆದು ಜೀವವ ತೆಯ್ದನು;
'ಭವತಿ ಭಿಕ್ಷಾಂದೇಹಿ' ಕವಿಗಳ ಮಂತ್ರವೆಂದನು ಮುದ್ದಣ
ಅಶ್ವಮೇಧವೆ, ವಿಶ್ವಮೇಧವೆ - ಕವಿಗೆ ಕಂಬನಿ ಕಂಕಣ!

ಅರಿವು ಪಾರಾಯಣವ ನಡೆಸಿದೆ ಸಾವು ಮಿರಿದ ಸತ್ಯದ
ಇರವು ಬಂದುದ ಮೆಟ್ಟಿ ನಿಂದಿದೆ ತುತ್ತತುದಿಯಲಿ ಕರ್ಮದ !
ಜೀವ ಕೋಟಾಕೋಟಿ ಕೋಟಲೆಗೊಂಡರಿಲ್ಲವೊ ಬೊಬಲ
ನರನ ದುಃಖವು ನರಗೆ, ಹರನಿಗೆ ಮೂರು ಕಣ್ಣೂ ನಿಷ್ಫಲ!

ಕಣ್ಮರೆಯು ಮಣ್ಮರೆಯು ದೇಹವು ಎಂದು ತತ್ತ್ವವು ಸಾರಲಿ
ಇಂದೊ ನಾಳೆಯೊ ನಮ್ಮ ಪಾಲೂ ಸಲ್ಲುವದು ಎಂದೆನ್ನಲಿ-
ಆದರಾ ಚೈತನ್ಯಜೀವನದರ್ಶವಿಲ್ಲಿಯೆ ಉಳಿವುದು
ಒಳಿತಿನೊಡಲಲಿ ಮೊಳೆತು ಬೆಳ್ಳಸವಾಂತು ಬಳೆವುದು ಹೊಳೆವುದು.

ಶಿವಶಿವೇಶ್ವರ ನಿನ್ನ ರೂಪವೆ ನನ್ನ ಕಣ್ಣಲಿ ತುಂಬಿದೆ
ನಿನ್ನ ನೆನಹಿನ ಜೇನಿಗೆನ್ನಯ ಮನದ ಮೊನೆಯಲಿ ಇಂಬಿದೆ.
ಅಳಿದನೆಂದವರಾರು ಚೀ ನಮ್ಮಚ್ಚುಮೆಚ್ಚಿನ ಮೂರುತಿ
ಎದೆಯ ಹೊಂಬಟ್ಟಲಲಿ ಇದಿಗೋ ಬಾಷ್ಪಬಿಂದುವಿನಾರತಿ!

ನಿನ್ನ ಪ್ರೀತಿಯ ಹೂವು ಮಲ್ಲಿಗೆ ಚೆಲು ಗುಲಾಬಿಗಳಿಲ್ಲಿವೆ
ಸ್ನೇಹ ಸೌಗಂಧವನು ಹರಡಿವೆ ತೀಡುವೆಲರಿಗೆ ನೀಡಿವೆ.
ನಡುಗುತಿಹ ಪಕಳೆಯಲಿ ಮೌನದಿ ಬಾಷ್ಪದಂಜಲಿ ಪಿಡಿದಿವೆ
ಶಾಂತಿವೊಂದಲಿ ಆತ್ಮ, ಓಂ ಶಿವ ಭಾವಚಿಂತಾರತ್ನವೆ!

ಬೆಳಕು

ಬೆಳಕೆ! ಓ ನನ್ನ ಬೆಳಕೆ!
ಜಗವನೆಲ್ಲವ ತುಂಬಿ ತುಳುಕುತಿಹ ಬೆಳಕೆ!
ಕಂಗಳಾಲಯ ತುಂಬಿ ಚುಂಬಿಸುವ ಬೆಳಕೆ!
ಎದೆಯ ಇನಿದಾಗಿಸುವ ಚೆನ್ನ ಬೆಳಕೆ!

ಓ! ಬೆಳಕು ಕುಣಿಯುತಿದೆ ನನ್ನ ಬಾಳಿನ ಮಧ್ಯ
ರಂಗದಲಿ; ಮುದ್ದಿನ ಕಣೆ,
ನನ್ನ ಒಲವಿನ ತಂತಿಯನ್ನೆ ಮೀಟುತ್ತಿಹುದು
ಆ ಬೆಳಕು; ನನ್ನರಗಿಣಿ.
ಬಾನು ಬಗೆ ತೆರೆಯುತಿದೆ
ಗಾಳಿ ಹರಿದೋಡುತಿದೆ
ನಗೆ ಸಾಗಿ ಹೋಗುತಿದೆ ಬುವಿಯ ಮೇಲೆ!

ಎನಿತೊ ಬಣ್ಣದ ಚಿಟ್ಟೆ ಬೆಳಕಿನಾ ಕಡಲಲ್ಲಿ
ಹಾಯಿಗಳ ಹರಹುತಿಹವು,
ಬೆಳಕಿನ ತರಂಗಗಳ ಅಂಚಿನಲಿ ತೇಲುತಿವೆ
ನೈದಿಲೆಯು ಜಾಜಿ ಹೂವು.

ಮೋಡ ಮೋಡಗಳಲ್ಲಿ ಬೆಳಕು ಬಂಗಾರ -ಹುಡಿ;
ರತ್ನಗಳ ಸುರಿಸುತಿಹುದು;
ಎಲೆಯಿಂದ ಎಲೆಗೆ ಸಲೆ ಉಲ್ಲಾಸವಲೆಯುತಿದೆ
ಸಂತೋಷ ಮಿಳಿರುತಿಹುದು.
ಸ್ವರ್ಗದಲಿ ಹರಿವ ನದಿ ಮೇರೆದಪ್ಪುತ ತನ್ನ
ಆನಂದಪೂರದಲಿ ಮುಳುಗಿಸಿಹುದು.

— "Geetanjali" 53

ಸಾಮರಸ್ಯ

ಹೃದಯದರವಿಂದವೇ ಮನದ ಮಂದಾರವೇ
ಒಳಗುಂದದಮಲ ಸೌರಭಸಾರವೆ!
ಅರಳಿರುವ ದಲದಲದಿ ನಿನ್ನ ಪದತಲವಿರಿಸಿ
ಚಿತ್ತೈಸು-ನನ್ನೊಲವೆ ನನ್ನ ಬಲವೆ!

ತೆಳ್ಳತೆಳ್ಳನೆ ತೀಡಿ ಮೆಲ್ಲಮೆಲ್ಲನೆ ಹಾಡಿ
ಒಯ್ಯನೊಯ್ಯನೆ ಒಲಿವ ತಂಗಾಳಿಯು
ನಿನ್ನುಸಿರ ನರುಗಂಪು ನಿಚ್ಚಪ್ರಸಾದವದು
ಪ್ರಣವನಾದವಗ್ಗೈವ ಭೃಂಗಾಳಿಯು!

ಹಾಲು ಬೆಳದಿಂಗಳಿನ ಕೆನೆಯ ರುಚಿ ನೋಡಿದೊಲು
ಮನದ ಮೊನೆಯಲಿ ನಿನ್ನ ಹಸಿರ ಕುಸುರು
ತಳಿರ ಜೊಂಪದ ಮರೆಗೆ ಕೋಗಿಲೆಯು ಹಾಡಿದೊಲು
ಸಾಧನಾರಾಧನೆಯೆ ಜೀವದುಸಿರು.


ಸೂರ್ಯಕಾಂತದ ಶಿಲೆಗೆ ಕಿರಣ ಕೇಂದ್ರೀಕರಣ
ಮನಸಿನೇಕಾಗ್ರತೆಯೆ ಚಿಜ್ಯೋತಿಯು
ಶಾಂತ ಕಾಂತಿಯ ತಳೆದ ಕಣ್ಣೆ ಜ್ಯೋತಿರ್ಲಿಂಗ
ಅಂತರಂಗವನಂತ ಗರ್ಭಗುಡಿಯು.

ಧ್ಯಾನ ಮನನದ ವಾಣಿ ವೀಣಾ ವಿತಾನದಲಿ
ಜೀವ ತಳೆಯುವ ಭಾವಗೀತೆಯಂತೆ
ಒಂದು ಬೆಳಕಿನ ಕಿರಣ ನೂರೊಂದು ದಲಗಳನು
ಪುಲಕಿಸುತ ಪಾವನತೆ ಬೀರುವಂತೆ.

ಅಲ್ಲಿಂದ ಇಲ್ಲಿಂದ ಎಲ್ಲಿಂದಲೂ ಬರಲಿ
ಬಂದುದೆಲ್ಲವು ನಿನ್ನ ಬೆಳಕಿನಂದ
ಅನುಭವವು ಅನುಭಾವವಾಗಿ ಜೀವನ ಮಾಗಿ
ಹೂವಾಗಿ ಹರಡಿರಲಿ ಆ ಸುಗಂದ!

ನಿಲುವುಗನ್ನಡಿ ನೋಡಿ ತಿದ್ದಿ ತೀಡುವ ಯುವತಿ
ತನ್ನ ಚೆಲುವಿಗೆ ತಾನೆ ನಲಿಯುವಂತೆ
ಶಬ್ದಮುಕುರದಿ ಕವಿಯು ತನ್ನತನವನು ಕಂಡು
ಮುಗ್ಧ ಕಾವ್ಯಾನಂದ ಪಡೆಯುವಂತೆ.

ಎಲ್ಲೆಲ್ಲಿಯೂ ನಿನ್ನ ಇರವಿನನುಭವ ಬಂದು
ಒಳಗು ಹೊರಗೂ ಸಾಮರಸ್ಯ ನಿಂದು
ಎತ್ತ ಬಿದ್ದರು ನಿನ್ನ ಅಂಕಪರ್ಯಂಕದೊಳೆ
ತಳ್ಳಂಕಗೊಳ್ಳದಿಹ ಯೋಗವೆಂದು?



ಚೆನ್ನವೀರ ಕಣವಿಯವರು ಕನ್ನಡದ ಹಿರಿಯಕವಿಗಳ ಶ್ರೇಣಿಯಲ್ಲಿ ಅಗ್ರಗಣ್ಯರು. ಹೊಸಗನ್ನಡದ ಕಾವ್ಯಕ್ಷೇತ್ರದಲ್ಲಿ ಅವರ ಹೆಸರು ಎಂದೆಂದಿಗೂ ಹಸಿರು. ಕಣವಿಯವರು ಒಟ್ಟು ೧೬ ಕವನ ಸಂಕಲನಗಳನ್ನು ಹೊರ ತಂದಿದ್ದಾರೆ. ವಿದ್ಯಾ ವಿನಯ ಸಂಪನ್ನರಾದ ಕಣವಿಯವರು ಸರಳ ಜೀವಿ. ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆಗೂ ಕವಿಗಳಿಗೂ ಬಹಳ ಕಾಲದ ನಂಟು. ಇಂಥ ಮಧುರ ಬಾಂಧವ್ಯದ ನೆನಪಿನೊಂದಿಗೆ ಈ ಕಾವ್ಯ ಸಂಪುಟಗಳು ಪ್ರಕಟವಾಗುತ್ತಿವೆ.

"ಒಂದು ಕಾವ್ಯ ಸಂಪ್ರದಾಯದ ಆಟ ಮುಗಿದು ಕಾವ್ಯಸತ್ವದ ಪುನರವತಾರ ನವಶರೀರದಲ್ಲಿ ಮತ್ತೊಮ್ಮೆ ಆಗಬೇಕಾಗಿರುವ ಸಂಧಿಕಾಲದಲ್ಲಿ ಕವಿಯ ಬೆಳವಣಿಗೆ ಕಠಿಣ ಎಂಬುದನ್ನು ನಾವು ಮರೆಯಬಾರದು. ಕಣವಿಯವರ ಇತ್ತೀಚಿನ ಕವಿತೆಗಳನ್ನು ಓದಿದವರಿಗೆ ನವ್ಯಪರಿಸರದ ಪ್ರಜ್ಞೆ ಅವರಲ್ಲಿ ಆಗಲೇ ಜಾಗೃತವಾಗಿದೆಯೆಂದು ತಿಳಿಯುತ್ತದೆ."

"ಈ ಕವಿಯ ಮನೋಧರ್ಮ ಪ್ರಶಾಂತಿಯದಲ್ಲದೆ ರಭಸದ್ದಲ್ಲ. ಎಲ್ಲಿ ಚಿಂತನೆ, ಸೂಕ್ಷ್ಮತೆ, ನಯಬೇಕೋ ಅಲ್ಲಿ ಈ ಕವಿಯ ಕಾವ್ಯ ಯಶಸ್ವಿಯಾಗುತ್ತದೆ. ಮಾನವ ಹೃದಯದ ಚಿರಂತನ ಭಾವಭಾವಾಂತರಗಳ ಚಿತ್ರಣಕ್ಕೆ ಈ ಕವಿಯ ಮನೋಧರ್ಮ ಯೋಗ್ಯವಾದದ್ದು ಎನಿಸುತ್ತದೆ. ಇಲ್ಲಿ ಅಂಥ ಕವಿತೆಗಳ ಜೊತೆಗೆ 'ಪ್ರಗತಿಶೀಲ' ಎನ್ನಬಹುದಾದ ರಾಜಕೀಯ ಸಾಮಾಜಿಕ ಪದ್ಯಗಳೂ ಇವೆ.....

"ಕಲಾಪರವಶತೆಯಿಂದ, ನಿಷ್ಠುರ ಆತ್ಮವಿಮರ್ಶೆಯಿಂದ, ಪರಿಪೂರ್ಣತೆಯ ಛಲದಿಂದ ಮುಂದುವರಿದರೆ ಈ ಕವಿ ಕೃತಿರತ್ನಗಳ ರಚನೆಯಿಂದ ಕೃತಾರ್ಥರಾಗುವುದರಲ್ಲಿ ಸಂದೇಹವಿಲ್ಲ".

ಎಂ.ಗೋಪಾಲಕೃಷ್ಣ ಅಡಿಗ
'ನಾಗರಿಕ' ಪತ್ರಿಕೆಯ ವಿಮರ್ಶೆಯಿಂದ
೨೦-೬-೧೯೫೩

ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ
೮, ರಮ್ಯ, ಗೋಕುಲಂ 3ನೇ ಹಂತ, ಮೈಸೂರು-2